ಸುಶೀಲಾ ಪ್ರಕಾಶನದ 46ನೇ ಪುಷ್ಪ

॥ ಶ್ರೀ ದಿಗ್ವಿಜಯರಾಮೋ ವಿಜಯತೇ ॥

ಅಗಮ್ಯ ಮಹಿಮ

ಶ್ರೀ ಅಕ್ಷೋಭ್ಯತೀರ್ಥರು



ಶ್ರೀ ಅಕ್ಷೋಭ್ಯತೀರ್ಥರ ವೃಂದಾವನ, ಮಲಖೇಡ

ಲೇಖಕರು : ಎಸ್.ಕೆ. ಬದರೀನಾಥ್ (ವಕೀಲರು)




ಶ್ರೀ ಸತ್ಯಸಂತುಷ್ಟವಾರಾಬ್ಧೇಃ ಜಾತಃ ಸತ್ಯಪರಾಯಣಃ
ಚಿಂತಾಮಣಿ ಸದಾಭೂಯಾತ್ ಸತಾಂ ಚಿಂತಿತ್ ಸಿದ್ಧಯೇ॥




ಶ್ರೀ ಎಸ್.ಬಿ. ಕೃಷ್ಣಮೂರ್ತಿ ಮತ್ತು ಶ್ರೀಮತಿ ಎಸ್.ಕೆ. ಸುಶೀಲಾಬಾಯಿ (ನಾಗಮ್ಮ)
ಎಸ್.ಕೆ. ಬದರೀನಾಥ್‌ರವರ ತಂದೆ-ತಾಯಿ, ಸುಮನಾ ಬದರೀನಾಥ್‌ರವರ ಅತ್ತೆಮಾವ

ಶ್ರೀ ಮೂಲರಾಮೋ ವಿಜಯತೇ



ಸಮರ್ಪಣೆ

ಈ ಕೃತಿ ನಾನು ಬರದಿದ್ದಲ್ಲ. ನನ್ನಲ್ಲಿ ನಿಂತು ನನ್ನ ಕುಲಗುರುಗಳಾದ ಶ್ರೀ ಸತ್ಯಪರಾಯಣಾಂತರ್ಗತ ಶ್ರೀ ರಾಮದೇವರು ಬರೆದು, ಬರಸಿದ್ದು.

ಇದನ್ನು ನನ್ನ ವಿದ್ಯಾಗುರುಗಳಾದ ವಿದ್ಯಾವಾರಿಧಿ ಡಾ|| ಶ್ರೀ ಸತ್ಯಧ್ಯಾನಾಚಾರ್ಯಕಟ್ಟಿಯವರ ಚರಣಾರವಿಂದಗಳಲ್ಲಿ ಅರ್ಪಿಸಿ ಕೊಂಡಿದ್ದೇನೆ.

– ಎಸ್.ಕೆ. ಬದರೀನಾಥ್
(ಸದರಮಿನ್)

ಬೆಂಗಳೂರು
17–04–2012

ಅರಿಕೆ

ಶ್ರೀ ಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯರು, ಶ್ರೀ ಪ್ರಸನ್ನ ವಿಠಲದೇವರನ್ನು ಪ್ರಸನ್ನೀಕರಿಸಿಕೊಂಡವರು, ಮಾಧ್ವ ವಾಙ್ಮಯ ಪ್ರಪಂಚಕ್ಕೆ ಅನರ್ಘ್ಯರತ್ನವಾದ ಶ್ರೀ ಜಯತೀರ್ಥರನ್ನು ಇತ್ತು ಉಪಕರಿಸಿದ ಅಗಮ್ಯ ಮಹಿಮರಾದ ಶ್ರೀ ಅಕ್ಷೋಭ್ಯತೀರ್ಥರನ್ನು ಸ್ಮರಿಸಿದ ದಿನವೇ ಸುದಿನ.

ಈ ಪುಸ್ತಕವನ್ನು ಬರೆಯಲು ಶ್ರೀ ಅಕ್ಷೋಭ್ಯತೀರ್ಥರ ಕರುಣೆ ಹಾಗೂ ಅವರ ಅನುಗ್ರಹವೇ ಕಾರಣ. ಅವರ ಬಗ್ಗೆ ಮಾಹಿತಿಗಳು ವಿವಿಧ ಆಕರಗಳಿಂದ ದೊರಕಿ ಈ ಕೃತಿ ಮೂಡಿ ಬಂದಿದೆ. ಗೌರವ ಕಾರ್ಯದರ್ಶಿಯಾಗಿ ಶ್ರೀ ಮಾಧ್ವಯುವಕ ಸಂಘದಲ್ಲಿ ತೊಡಗಿಸಿಕೊಂಡಿರುವ ನನಗೆ ಗೌರವ ವಿದ್ಯಾರ್ಥಿನಿಲಯದ ಪಾಲಕಿಯವರು ಹಾಗೂ ಎನ್.ಎ.ಎಲ್. ಸಂಸ್ಥೆಯಲ್ಲಿ ಉನ್ನತ ಹುದ್ದೆಯಲ್ಲಿದ್ದ ಅವರ ಪತಿಯವರು ಅಜ್ಞಾತವಾಗಿರಲು ಇಚ್ಛಿಸಿ ಹೊತ್ತಿಗೆಯ ಮುದ್ರಣದ ಖರ್ಚನ್ನು ಪೂರ್ಣವಾಗಿ ಭರಿಸಿದ್ದಾರೆ. ಅವರಿಗೆ ಶ್ರೀ ಅಕ್ಷೋಭ್ಯ ತೀರ್ಥಾಂತರ್ಗತ, ಶ್ರೀ ಮುಖ್ಯಪ್ರಾಣಾಂತರ್ಗತ ಶ್ರೀಮೂಲರಾಮದೇವರು ಅವರಿಗೆ ಸನ್ಮಂಗಳವನ್ನುಂಟುಮಾಡಲಿ. ನನ್ನ ಕಾರ್ಯಕ್ಕೆ ಸಹವರ್ತಿಯಾಗಿರುವ ನನ್ನ ಪತ್ನಿ ಸುಮನಾಬದರೀನಾಥ್‌ಳಿಗೂ ಸನ್ಮಂಗಲವನ್ನುಂಟು ಮಾಡಲಿ.

ಈ ಕೃತಿಯನ್ನು ಬರೆಯಲು ಬಹಳಷ್ಟು ಗ್ರಂಥಗಳ ಎರವಲನ್ನು ಪಡೆದಿರುತ್ತೇನೆ. ಆ ಗ್ರಂಥಗಳ ಲೇಖಕರಿಗೆ ಋಣಿ. ನನ್ನ ಕುಲಗುರುಗಳಾದ ಶ್ರೀ ಸತ್ಯಪರಾಯಣತೀರ್ಥರ ಅನುಗ್ರಹ, ತಾಯಿ ಸುಶೀಲಾಬಾಯಿ (ನಾಗಮ್ಮ) ತಂದೆ ಕೃಷ್ಣಮೂರ್ತಿರಾಯರ ಸಂಪೂರ್ಣಾನುಗ್ರಹ ನನ್ನ ಮೇಲೆ ಸದಾ ಇರಲಿ.

ಬೆಂಗಳೂರು
17–04–2012

–ಎಸ್.ಕೆ. ಬದರೀನಾಥ್
(ಸದರಮಿನ್)

ಶ್ರೀ ಮೂಲರಾಮೋವಿಜಯತೇ

ಶ್ರೀ ಅಕ್ಷೋಭ್ಯತೀರ್ಥರು

"ನಾರಾಯಣಂ ಸುರಗುರುಂ ಜಗದೇಕನಾಥಂ
ಭಕ್ತಪ್ರಿಯಂ ಸಕಲಲೋಕ ನಮಸ್ಕೃತಂಚ
ತ್ರೈಗುಣ್ಯ ವರ್ಜಿತಮಜಂ ವಿಭುಮಾದ್ಯಮೀಶಂ
ವಂದೇ ಭವಘ್ನಮಮರಾಸುರಸಿದ್ಧವಂದ್ಯಮ್ " ||

ಶ್ರೀ ಮನ್ನಾರಾಯಣನು ಸುರರಿಗೆ ಗುರುವಾಗಿರುವನು.
ಜಗತ್ತಿಗೆ ಮುಖ್ಯಸ್ವಾಮಿಯು (ಜಗದೇಕನಾಥಂ)
ಭಕ್ತರಿಗೆ ಪರಮ ಪ್ರಿಯನು (ಸಕಲಜನಸ್ತೋಮದಿಂದ ನಮಸ್ಕರಿಸಿ ಕೊಳ್ಳುವವನು)
ತ್ರೈಗುಣಗಳಾದ (ಮೂರು) ಸತ್ವ, ರಜಸ್, ಮತ್ತು ತಮಸ್ಸಿನಿಂದ ರಹಿತನು
ಸರ್ವಸಮರ್ಥನು, ಉತ್ಪತ್ತಿರಹಿತನು.
ಜ್ಞಾನಾದಿ ಸಕಲಗುಣ ಪರಿಪೂರ್ಣನು ಜನನ ರಹಿತನು
ಆದಿಸೃಷ್ಟಿಕರ್ತನು (ಪ್ರಥಮ)
ಸಂಸಾರದಿಂದ ಪರಿಹರಿಸುವವನು, ಅಮರರಿಂದ, ಅಸುರರಿಂದ, ಸಿದ್ಧರಿಂದ
ನಮಸ್ಕರಿಸಿಕೊಳ್ಳುವವನು (ವಂದ್ಯ)
ಆದ ಶ್ರೀಮನ್ನಾರಾಯಣನನ್ನು ವಂದಿಸುವೆನು.

(ಮಹಾಭಾರತ–ತಾತ್ಪರ್ಯನಿರ್ಣಯ, ಅಧ್ಯಾಯ–2)

ಶ್ರೀ ಆಚಾರ್ಯ ಮಧ್ವರ ಮಹಾಭಾರತ ತಾತ್ಪರ್ಯನಿರ್ಣಯದ ಎರಡನೇ ಅಧ್ಯಾಯದ 58ನೇ ಶ್ಲೋಕವಾಗಿರುವ ಇದು ಶ್ರೀ ಮನ್ನಾರಾಯಣನ ಸ್ತೋತ್ರವಾಗಿರುವುದು. ಶ್ರೀ ಮಧ್ವಾಚಾರ್ಯರು ಪ್ರತಿಪಾದಿಸಿದ ಮತವು ದ್ವೈತ ಮತವಾಗಿದ್ದು ಅದು ನಿರ್ದಿಷ್ಟವಾಗಿದ್ದು, 21 ಕುಭಾಷ್ಯಗಳನ್ನು ಖಂಡಿಸಿ ಸತ್‌ಸಿದ್ಧಾಂತವನ್ನು ಪ್ರತಿಪಾದಿಸುವುದಾಗಿದೆ. ಶ್ರೀ ಸಿ.ಎಂ. ಪದ್ಮನಾಭಾಚಾರ್‌ರವರು ತಮ್ಮ "ಶ್ರೀ ಮಧ್ವಾಚಾರ್ಯರ ಜೀವನ ಚರಿತ್ರೆ" ಪುಟ 146ರಲ್ಲಿ ಶ್ರೀಮಧ್ವಾಚಾರ್ಯರ ಬಗ್ಗೆ ಈ ರೀತಿ ಬರೆಯುತ್ತಾರೆ.

"ವೇದಾಂತದಲ್ಲಿ ನುಸುಳಿಕೊಂಡಿದ್ದ ಅನಿರ್ವಚನೀಯ ರಹಸ್ಯವೆಂಬುದನ್ನು ಕಿತ್ತೊಗೆದು, ಮತಧರ್ಮವನ್ನು ಮತ್ತೊಮ್ಮೆ ಸುಬುದ್ಧಿಯ ಪೀಠದ ಮೇಲೆ ನಿಲ್ಲಿಸಿದ ಕೀರ್ತಿ ಬೇರೆ ಎಲ್ಲಾ ಸುಧಾರಕರಿಗಿಂತ ಹೆಚ್ಚಾಗಿ ಶ್ರೀ ಮಧ್ವರಿಗೆ ಸಲ್ಲುತ್ತದೆ."

ಶ್ರೀ ಮಧ್ವರು ತಮ್ಮ ಮತದ ಅನುಯಾಯಿಗಳಿಗೆ ವೇದಾಭ್ಯಾಸವನ್ನು ಪುರಾಣೇತಿಹಾಸಗಳಿಂದ ಮಾಡಬೇಕೆಂದು, ಹಾಗೂ ಅವುಗಳ ಸಹಾಯವಿಲ್ಲದೆ ವೇದಾಂತದ ಅಭ್ಯಾಸವು ಅಪೂರ್ಣವು ಎಂದು ಹೇಳಿದ್ದಾರೆ. ಶ್ರೀರಾಮಾನುಜಾಚಾರ್ಯರ ಮತದವರ ಅನುಯಾಯಿಗಳು ರಾಮಾಯಣಕ್ಕೆ ಹೆಚ್ಚು ಪ್ರಾಶಸ್ತ್ಯವನ್ನಿತ್ತಿದ್ದಾರೆ. ಹಾಗೆಯೇ ಶ್ರೀ ಮಧ್ವರು ಮಹಾಭಾರತ ತಾತ್ಪರ್ಯ ನಿರ್ಣಯಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ನೀಡಿದ್ದಾರೆ. ಒಳ ಅರ್ಥವನ್ನು ನಯ ನೀತಿಗಳನ್ನು ಸಂಧಿಗ್ಧ ಗ್ರಂಥಭಾಗಕ್ಕೆ ತಿಳಿಸಿಕೊಟ್ಟಿದ್ದಾರೆ. ಅವರು "ಶ್ರೀ ಮಹಾಭಾರತದ ಭಾಷಾ ಪ್ರಯೋಗದಲ್ಲಿ ಎಲ್ಲೆಡೆಯಲ್ಲೂ ಹತ್ತು ಹತ್ತು ಅರ್ಥವುಳ್ಳದೆಂದು ಹೇಳಿದ್ದಾರೆ". ಅವರ ಸಿದ್ಧಾಂತದಲ್ಲಿ ಪ್ರತಿಪಾದಿಸಿದ ತತ್ವಗಳು..........

1. ಶ್ರೀ ವೇದವ್ಯಾಸದೇವರು ನಾರಾಯಣನ ಅವತಾರ.

2. ಸರ್ವೋತ್ತಮನು ಒಬ್ಬನೇ ಇರುವುದು.

3. ಅವನು ಹಲವು ನಾಮಗಳಾದ ಬ್ರಹ್ಮ, ವಿಷ್ಣು, ನಾರಾಯಣನೆಂದು ಕರೆಯಲ್ಪಡುತ್ತಾನೆ.

4. ಅವನು ಸರ್ವೋತ್ತಮ, ಅವನಿಗೆ ಅಸಂಖ್ಯಾತ ಹೆಸರುಗಳಿವೆ. ಅವನು ಪೂರ್ಣ, ಪರಿಪೂರ್ಣ, ದೋಶ ರಹಿತ.

5. ಅವನು ದೋಶ ರಹಿತ ಅಥವ ಪರಿಮಿತ ದೂರ, ಪಾರವಾರ ದೋಷಾತೀತ, ಅವನೊಬ್ಬನೇ ಸ್ವತಂತ್ರ.

6. ಶ್ರೀ ಬ್ರಹ್ಮ-ರುದ್ರ ಮತ್ತು ಮಿಕ್ಕವರೆಲ್ಲರೂ ಸಂಪೂರ್ಣವಾಗಿ ಅವನನ್ನು ಸರ್ವಕಾಲದಲ್ಲಿ ಸರ್ವಾವಸ್ಥೆಯಲ್ಲಿ ಆಶ್ರಯಿಸಿದ್ದಾರೆ.

7. ಅವನೇ ಜಗತ್ಕರ್ತ, ಸಂರಕ್ಷಕ, ಲಯಕರ್ತ, ಜ್ಞಾನ ಪ್ರದಾತ

8. ಭಕ್ತಿ ಮತ್ತು ಜ್ಞಾನ ಮುಕ್ತಿಗೆ ನಿರ್ದಿಷ್ಟವಾದ ಸಾಧನೆಗಳಾದರೂ, ಭಕ್ತಿಯೂ ಸಾಧನವಲ್ಲದೆ, ಮುಕ್ತಿ ಕೊಡುವಂತಹುದು. ಜ್ಞಾನ ಜನ್ಯ ಭಕ್ತಿಯೇ ಮುಕ್ತಿಯನ್ನು ಕೊಡಿಸುವುದು.

9. ಪಂಚ ಭೇದವಿದೆ (ಐದು ವಿಧವಾದ ಭೇಧಗಳು ವ್ಯತ್ಯಾಸಗಳು) ಆ ವ್ಯತ್ಯಾಸಗಳು ನಾಶವಿಲ್ಲ.

10. ಸೃಷ್ಟಿ ಮತ್ತು ಜಗತ್ ನಿರ್ಮಾಣ ವಾಸ್ತವಿಕ, ಮೂಲ ಪ್ರಕೃತಿ, ಸ್ಥೂಲ ಪದಾರ್ಥವು ಜಗತ್ತಿಗೆ ಹೇತುವಾಗಿದೆ.

ಪರಮಾತ್ಮನೊಬ್ಬನೇ ಸ್ವತಂತ್ರವಾಗಿರುವನು. ಜೀವಜಡಗಳೆಲ್ಲವೂ ಸರ್ವಾವಸ್ಥೆಯಲ್ಲೂ ಅಸ್ವತಂತ್ರ, ಸರ್ವಾವಸ್ಥೆಯಲ್ಲೂ ಅವನ ಅಧೀನ.

11. ಪ್ರತಿ ಹಂತದಲ್ಲಿಯೂ ನಮಗೆ ಅವನ ದಯೆಯಿರಬೇಕು. ಅದಕ್ಕೆ ಅವನನ್ನು ಪ್ರಾರ್ಥಿಸಬೇಕು.

12. ನಾವು ದೇವರಲ್ಲಿಯೂ ಹಾಗೂ ಅವನ ಭಕ್ತರಲ್ಲೂ, ಭಕ್ತಿ ಮಾಡುವುದನ್ನು ಬೆಳಸಿಕೊಳ್ಳಬೇಕು.

ಆಚಾರ್ಯ ಮಧ್ವರು ಉಪದೇಶಿಸಿದ ಸಿದ್ಧಾಂತ **"ದ್ವೈತ ವೇದಾಂತ"** **"ವೈಷ್ಣವೇದಾಂತ"**, **"ತತ್ವವಾದ"** ಎಂದು ಪ್ರಖ್ಯಾತವಾಗಿದೆ. **"ನಮಾಧವೋ ಸಮೋದೇವಃ"** ಎಂಬ ತತ್ವವನ್ನು ಶ್ರೀ ಮಧ್ವಾಚಾರ್ಯರು ಉಪದೇಶಿಸಿರುವದರಿಂದ ಇವರಿಗೆ **"ನಚಮಧ್ವ ಸಮೋಗುರು"** ಎಂದು ಸಂದಿರುವ ಗೌರವವಾಗಿದೆ. ಸರ್ವೋತ್ತಮನಾದ ಶ್ರೀ ಮನ್ನಾರಾಯಣನೇ ವೇದವ್ಯಾಸರ ಅವತಾರನಾಗಿದ್ದಾನೆ. ಶ್ರೀಮದಾನಂದತೀರ್ಥರು ಜೀವೋತ್ತಮನಾದ ಶ್ರೀ ವಾಯುದೇವರ ಅವತಾರ ವಿಶಿಷ್ಟರು.

ಇವರ ಸಾಕ್ಷಾತ್ ಶಿಷ್ಯರಲ್ಲಿ 4ನೇಯವರು ಶ್ರೀ ಅಕ್ಷೋಭ್ಯತೀರ್ಥರು. ಮಹಾಸ್ವಾಮಿಗಳು ಶ್ರೀ ಮಧ್ವಾಚಾರ್ಯರಿಂದ ಸಣ್ಣವಯಸ್ಸಿನಲ್ಲಿಯೇ ಸನ್ಯಾಸ ಸ್ವೀಕಾರ ಮಾಡಿದರು. ಅಕ್ಷೋಭ್ಯತೀರ್ಥರ ಪೂರ್ಣಾಯುಸ್ಸನ್ನು ತಿಳಿದಿದ್ದ ಆಚಾರ್ಯ ಮಧ್ವರು, ಶ್ರೀಮದುತ್ತರಾದಿ ಮಠದ ಪೀಠಾಧಿಪತ್ಯವನ್ನು ಶ್ರೀ ಪದ್ಮನಾಭತೀರ್ಥರು, ಶ್ರೀ ನರಹರಿತೀರ್ಥರು ಹಾಗೂ ಶ್ರೀಮಾಧವತೀರ್ಥರ ನಂತರ ವಹಿಸಲು ಅಪ್ಪಣೆ ಮಾಡಿದ್ದರು. ಶ್ರೀ ಪದ್ಮನಾಭತೀರ್ಥರು ಆಚಾರ್ಯ ಮಧ್ವರ ನಂತರ ಸರ್ವಜ್ಞಪೀಠವನ್ನಲಂಕರಿಸಿದ ಯತೀಶ್ವರರು. ಇವರು ಮಾಧ್ವ ಮತದ ಮೂರು ಗುರುಪೀಠಗಳಾದ ಶ್ರೀ ಮದುತ್ತರಾದಿ, ಶ್ರೀ ರಾಘವೇಂದ್ರಸ್ವಾಮಿ, ಶ್ರೀ ವ್ಯಾಸರಾಯಸ್ವಾಮಿ ಮಠಗಳ ಆದ್ಯ ಪುರುಷರು. ಶ್ರೀ ಜಯತೀರ್ಥರು ಇವರನ್ನು ಹೀಗೆ ಸೋತ್ರ ಮಾಡಿದ್ದಾರೆ

ಕೃಪಾಲವಃ ಪಂಕಜನಾಭತೀರ್ಥಾಃ ಕೃಪಾಲವಃ ಸ್ಯಾನ್ಮಯಿ ನಿತ್ಯ ಮೇಷಾಂ

ಇವರ ನಂತರ ಶ್ರೀ ನರಹರಿತೀರ್ಥರು ಸರ್ವಜ್ಞ ಪೀಠಾರೋಹಣ ಮಾಡಿದರು. ಮಹಾನುಭಾವರಾದ ಶ್ರೀ ನರಹರಿತೀರ್ಥರು ಶ್ರೀ ಆಚಾರ್ಯ ಮಧ್ವರಿಗೆ ಅವರ ಅಪ್ಪಣೆಯನ್ತೆ ಶ್ರೀಮೂಲರಾಮ ಸೀತಾದೇವಿಯರನ್ನು ಗಜಪತಿ ದೇಶದಿಂದ ತಂದಿತ್ತವರು.

ಸಸೀತಾ ಮೂಲರಾಮಾರ್ಚಾ ಕೋಶೆ ಗಜಪತೇಃ ಸ್ಥಿತಾ
ಯೇನಾನೀತಾ ನಮಸ್ತಸ್ಮೈ ಶ್ರೀಮನ್ನೃಹರಿ ಭಿಕ್ಷವೇ

ಶ್ರೀ ನರಹರಿತೀರ್ಥರ ಅನಂತರ ಶ್ರೀ ಮಾಧವತೀರ್ಥರು ಶ್ರೀ ಮೂಲ ರಾಮಸೀತಾದೇವಿಯರನ್ನು ಪೂಜೆ ಮಾಡಿದರು. ಅವರು ದ್ವೈತ ವೇದಾಂತ ಸಾಮ್ರಾಜ್ಯಾಧಿಪತಿಗಳಾದರು. ಮಹಾಸ್ವಾಮಿಗಳು ವಂಶರಾಮಮೂರ್ತಿಯನ್ನು ಶ್ರೀ ಮಠದಲ್ಲಿ ಸ್ಥಾಪಿಸಿ ಪೂಜೆ ಮಾಡಿದರು.

ತತೋ ಮಹಾನ್ ಮಾಧವತೀರ್ಥನಾಮಾ
ರಾಜ್ಯಂಗುರೋಃ ಪೂಜ್ಯತರಂಪ್ರಪದೇ
ಯೇನ ಪ್ರತಿಷ್ಠಾಪಿತರಾಮಮೂರ್ತಿರ್ವಂಶ್ಯೇತಿ
ಕೀರ್ತಿಂ ಪ್ರಯಯೌ ಜಗತ್ಯಾಮ್ ॥7॥ (ಸತ್ಯನಿಧಿ ವಿಲಾಸ ಪುಟ–52–53)

ನಂತರ ತಪಸ್ಸಿನಲ್ಲಿಯೇ ಆಸಕ್ತಿ ಹೊಂದಿದ ಅಕ್ಷೋಭ್ಯತೀರ್ಥರು ವಿಪಕ್ಷ ವಿದ್ವಾಂಸರಿಂದ ಖಂಡಿಸಲು ಆಗದ ದ್ವೈತ ವೇದಾಂತ ಸಾಮ್ರಾಜ್ಯವನ್ನು ಹೊಂದಿ ಮಾಯಾವಾದವನ್ನು ಪ್ರತಿಪಾದಿಸುತ್ತಿದ್ದ ಸನ್ಯಾಸಿಗಳನ್ನು ಸೋಲಿಸಿ ದಿಗ್ವಿಜಯಗೈದರು.

ಅಕ್ಷೋಭ್ಯಸ್ತ ಪಸಿರತಸ್ತತೋ ವಿಪಕ್ಷೈರಕ್ಷೋಭ್ಯಂ
ಯತಿ ಕುಲರಾಜ್ಯ ಮಾದದಾನಃ।
ಶಿಕ್ಷಾರ್ಥಂ ಜಗತಿ ಚಚಾರ ದೈತ್ಯ ಮಾಯಾಭಿಕ್ಷೂಣಾಂ
ಪ್ರಕಟಿತವಾದ ಜೃತ್ರ ಯಾತ್ರಃ ॥ (ಸತ್ಯನಿಧಿವಿಲಾಸ–ಪುಟ 53)

ಆಚಾರ್ಯ ಮಧ್ವರು ಅಕ್ಷೋಭ್ಯ ತೀರ್ಥರಿಗೆ ತುರಿಯಾಶ್ರಮವನ್ನು ನೀಡುವ ಕಾಲದಲ್ಲಿ ಶ್ರೀರಾಮ, ಸೀತಾ ಮತ್ತು ಲಕ್ಷ್ಮಣದೇವರುಗಳ ವಿಗ್ರಹಗಳನ್ನು ಇತ್ತರು. ಶ್ರೀ ಮದುತ್ತರಾದಿಮಠದ ಅಧಿಪತ್ಯವನ್ನು ಕೊಡುವಕಾಲದಲ್ಲಿ ಶ್ರೀ ಮಾಧವತೀರ್ಥರು ಶ್ರೀಮದಾಚಾರ್ಯರಿಂದ ಕರಾರ್ಚಿತವಾದ ಶ್ರೀಮೂಲ

ರಾಮಸೀತಾದೇವಿಯರನ್ನು ಶ್ರೀ ಅಕ್ಷೋಭ್ಯತೀರ್ಥರಿಗೆ ವಹಿಸಿಕೊಟ್ಟರು ಶ್ರೀ ಪದ್ಮನಾಭತೀರ್ಥರು ಹಾಗೂ ಇವರ ಸಾಕ್ಷಾತ್ ಗುರುಗಳಾದ ಶ್ರೀ ಮಾಧವ ತೀರ್ಥರು ಮಾಡಿದಂತೆ ಶ್ರೀಮದಾಚಾರ್ಯರು ಇವರಿಗೆ ಆಶ್ರಮ ನೀಡುವ ಕಾಲದಲ್ಲಿ ನೀಡಿದ ಶ್ರೀ ರಾಮ ಸೀತಾ ಲಕ್ಷ್ಮಣ ವಿಗ್ರಹಗಳನ್ನು ತಮ್ಮ ನೆಚ್ಚಿನ ಶಿಷ್ಯರಲ್ಲಿ ಒಬ್ಬರಾಗಿದ್ದ ಶ್ರೀ ತ್ರೈಲೋಕ್ಯ ಭೂಷಣರಿಗೆ ಕೊಟ್ಟು ತಮ್ಮ ಹೆಸರಿನ ಮಠದ ಪರಂಪರೆಯನ್ನು ಪ್ರಾರಂಭಿಸಿದರು. ಈ ಪರಂಪರೆಗೆ ಕೂಡಲಿ ಆರ್ಯ ಅಕ್ಷೋಭ್ಯತೀರ್ಥ ಮಠವೆಂದು ಪ್ರಖ್ಯಾತಿಗೊಂಡಿತು. ಮಹಾಸ್ವಾಮಿಗಳು ಸಂಗಮ ಸ್ಥಳವಾದ ಕೂಡಲಿಯಲ್ಲಿ ತಮ್ಮ ಮಠವನ್ನು ಸ್ಥಾಪಿಸಿದ್ದರಿಂದ ಕೂಡಲಿ ಆರ್ಯ ಅಕ್ಷೋಭ್ಯತೀರ್ಥರ ಮಠವೆಂದು ಹೆಸರಾಯಿತು. ಇದಲ್ಲದೇ, ಅಕ್ಷೋಭ್ಯತೀರ್ಥರು ಮುಂದೆ ಅಚ್ಯುತಪ್ರೇಕ್ಷಾಚಾರ್ಯರ ಪರಂಪರೆಯ ಭೀಮನಕಟ್ಟೆಗೆ ಬಂದರು. ಈ ಸ್ಥಳದಲ್ಲಿ ದ್ವಾರಕಾ ಪೀಠಾಧೀಶ್ವರರು ಬಲಾಢ್ಯ ರಾಗಿದ್ದು ಅವರ ಪ್ರಭಾವ ವಿಶೇಷವಾಗಿತ್ತು. ಶ್ರೀಗಳವರು ಬಂದದ್ದನ್ನು ತಿಳಿದು ನರಸಿಂಹ ಕ್ಷೇತ್ರದಲ್ಲಿದ್ದ ಅದ್ವೈತ ಯತಿಗಳು ಇವರಿಗೆ ವೇದಾಂತ ಜಿಜ್ಞಾಸೆಗೆ ಔತನವನ್ನಿತ್ತರು. ಅಕ್ಷೋಭ್ಯತೀರ್ಥರು ಸಾಮಾನ್ಯರೇ, ಇವರು ಬಯಸಿದ್ದು ಕಾಲಿಗೆ ತಾನಾಗಿಯೇ ಬಂದು ಸುತ್ತಿಕೊಂಡ ಬಳ್ಳಿಯಂತೆ ತಾನಾಗಿಯೇ ವಾದ್ವಾಹ್ವಾನ ಬಂದೊದಗಿತು. ಅದ್ವೈತಮತದ ಯತಿಗಳ "ನಾನೇ ಬ್ರಹ್ಮ" ಪ್ರಪಂಚ ಮಿಥ್ಯಾ" ಎಂಬ ತತ್ವವನ್ನು ಖಂಡಿಸಲು ಅವಕಾಶಸಿಕ್ಕಿದ್ದು ಹಸಿದವನಿಗೆ ಕರೆದು ಔತಣ ಬಡಿಸಿದಂತಾಯಿತು. ಶ್ರೀ ಅಕ್ಷೋಭ್ಯತೀರ್ಥರು ದ್ವೈತವೇದಾಂತವನ್ನು ಪ್ರತಿಪಾದಿಸಿ ಆ ಅದ್ವೈತ ಯತಿಗಳನ್ನು ಸೋಲಿಸಿ ಶ್ರೀ ಮದಾನಂದತೀರ್ಥರ ಸತ್‌ಸಿದ್ಧಾಂತವನ್ನು ಎತ್ತಿ ಹಿಡಿದರು. ಜಗನ್ಮಾನ್ಯರು ಆಚಾರ್ಯರ ಅನುವ್ಯಾಖ್ಯಾನಕ್ಕೆ ಟೀಕಾ ಗ್ರಂಥವಾದ ಶ್ರೀ ಮನ್ನ್ಯಾಯ ಸುಧಾವನ್ನು ರಚಿಸಿದ ಶ್ರೀ ಜಯತೀರ್ಥರು ಅಕ್ಷೋಭ್ಯತೀರ್ಥರನ್ನು ಈ ರೀತಿ ಸ್ಮರಿಸಿರುತ್ತಾರೆ. ಶ್ರೀಮನ್ನ್ಯಾಯ ಸುಧಾದಿಂದ ಉದ್ಧೃತ;

ನ ಶಬ್ದಾಗಾಢಾ ನ ಚ ನಿಗಮ ಚರ್ಚಾಸು ಚತುರಾಃ
ನ ಚ ನ್ಯಾಯೇ ಪ್ರೌಢಾನಚ ವಿದಿತ ವೇದ್ಯಾ ಅಪಿವಯಂ
ಪರಂ ಶ್ರೀ ಮತ್ಪೂರ್ಣ ಪ್ರಮತಿ ಗುರುಕಾರುಣ್ಯ ಸರಣಿಂ
ಪ್ರಪನ್ನಾ ಮಾನ್ಯಾಸ್ಮ ಕಿಮಪಿಚವಂದಂ ತೋಪಿ ಮಹತಾಮ್ ॥

ಶ್ರೀ ಬಿದರಹಳ್ಳಿ ಶ್ರೀನಿವಾಸತೀರ್ಥರು ಈ ಕೆಳಕಂಡಂತೆ ಇದಕ್ಕೆ ಟಿಪ್ಪಣಿ ಬರೆದಿರುತ್ತಾರೆ.

"ಗುರೋರಿತ್ಯೇಕ ವಚನಂ ಸಮುದಾಯ ಸಾಪೇಕ್ಷಂ।
ಗುರೂಣಾ ಮಿತ್ಯರ್ಥ ಆದಿಗುರುವ: ಶ್ರೀಮದಾನಂದ ತೀರ್ಥ:

ಪರಮಗುರವಃ (ಗುರುಗಳ ಗುರುಗಳು) ಪದ್ಮನಾಭತೀರ್ಥಾ: ಸಾಕ್ಷಾತ್ ಗುರುವಃ ಅಕ್ಷೋಭ್ಯತೀರ್ಥಶ್ಚ ಗುರುಶಬ್ದೇನ ಸಂಗೃಹಿತಾ ಇತಿ ಜ್ಞಾತವ್ಯಂ"

ಸಾಮಾನ್ಯ ಮನುಜನಿಗೆ ವಜ್ರಗಳಿಂದ ಕಂಗೊಳಿಸುವ ವಜ್ರಮಾಲೆಯು ಲಭ್ಯವಾಗುವುದೇ? ಅಂತೆಯೇ ಸುಧಾ ಎಂಬ ನವರತ್ನ ಖಚಿತವಾದ ರತ್ನದ ಮಾಲೆಯನ್ನು ಪಡೆಯಲು ಅನೇಕಾನೇಕ ಜನ್ಮದ ತಪಸ್ಸಿನಿಂದ ಆರ್ಜಿತವಾದ ಪುಣ್ಯದಿಂದಲೇ ಅದು ಸಾಧ್ಯ. ಪ್ರಾತಃಸ್ಮರಣೀಯರಾದ ಶ್ರೀ ಸತ್ಯಪ್ರಮೋದ ತೀರ್ಥರು ತಮ್ಮ ತಪೋ ಬಲದಿಂದ 50 ವರ್ಷಗಳು ನಿರಂತರವಾಗಿ ದಿನ ನಿತ್ಯ ಸುಧಾಪಾಠವನ್ನು ಹೇಳಿದ ಯತಿಪುಂಗವರು.

ಸತ್ಯಾಭಿಜ್ಞಕರಾಬ್ಜೋತ್ಥಾನ್ ಪಂಚಾಶದ್ವರ್ಷ ಪೂಜಕಾನ್
ಸತ್ಯಪ್ರಮೋದ ತೀರ್ಥಾರ್ಯಾನ್ ನೌಮಿನ್ಯಾಯ ಸುಧಾರತಾನ್ ॥

ಜಗತ್ಪ್ರಸಿದ್ಧರಾದ ಟೀಕಾಚಾರ್ಯರೇ ತಮ್ಮ ಗುರುಗಳನ್ನು ಅಮೋಘವಾಗಿ ಸ್ತುತಿಸಿರುವಾಗ, ಆಚಾರ್ಯ ಮಧ್ವರ ಸಾಕ್ಷಾತ್ ಶಿಷ್ಯರಾಗಿ ಸನ್ಯಾಸವನ್ನು ಸ್ವೀಕರಿಸಿದ ಅಕ್ಷೋಭ್ಯತೀರ್ಥರು ಎಷ್ಟು ಮಹತ್ವವುಳ್ಳವರಾಗಿದ್ದರೆಂದು ತಿಳಿಯಬಹುದು.

ಶ್ರೀ ಆಚಾರ್ಯ ಮಧ್ವರ ಸಾಕ್ಷಾತ್ ಶಿಷ್ಯರಾದ ಅಕ್ಷೋಭ್ಯತೀರ್ಥರ ಆಶ್ರಮ ಪೂರ್ವದ ನಾಮಧೇಯ ಶ್ರೀ ಗೋವಿಂದ ಶಾಸ್ತ್ರಿಗಳು. ಗುರುಕಥಾಕಲ್ಪತರು ಇದನ್ನು ಪುಷ್ಟೀಕರಿಸುತ್ತದೆ.

ತತಃ ಉತ್ತರದೇಶಾದ್ ಬ್ರಹ್ಮಚರ್ಯ ಸಮನ್ವಿತ:
ಗೋವಿಂದ ಶಾಸ್ತ್ರೀ ತಂ ಗತ್ವಾ ಸನ್ಯಾಸಂ ಸಮಯಾಚತ
ತಸ್ಮೈದ ತ್ವಾತು ಸನ್ಯಾಸಂ ಅಕ್ಷೋಭ್ಯಮುನಿರಿತ್ಯಥ
ನಾಮದತ್ವಾ ಚತುರ್ಭ್ಯೋಽಸೌಸರ್ವಾನ್ ಗ್ರಂಥಾನ ಬೋದಯಾತ್

ಅಲ್ಲದೇ, ಅಕ್ಷೋಭ್ಯತೀರ್ಥರು ಉತ್ತರ ಕರ್ನಾಟಕದವರೆಂದು ತಿಳಿಸುವುದಲ್ಲದೇ, ಅವರು ಮಧ್ವಾಚಾರ್ಯರಿಂದಲೇ ಆಶ್ರಮವನ್ನು ಸ್ವೀಕರಿಸಿದರೆಂದು ಹೇಳುತ್ತದೆ. Vide page 191 of the s,i,i, by Sewell ಇದನ್ನು ಸ್ಪಷ್ಟೀಕರಿಸುತ್ತದೆ. "At this time Akshobyateertha, disciple of

Anandateertha was Vaisnava pontiff. E.I. VI, 260. He was a contemporary of Vidyaranya who assisted the 5 Vijayanagar brothers"

ಶ್ರೀ ಅಕ್ಷೋಭ್ಯತೀರ್ಥರು ಇದರಿಂದ ತಿಳಿಯ ಬರುವುದೇನೆಂದರೆ ವಿದ್ಯಾರಣ್ಯರ ಸಮಕಾಲೀನರಾಗಿದ್ದರೆಂದು ಮಹಾಸ್ವಾಮಿಗಳು ಅವರ ಪರಮ ಗುರುಗಳಾದ ನರಹರಿತೀರ್ಥರಂತೆ, ಆಶ್ರಮಪೂರ್ವದಲ್ಲಿ ರಾಜಕಾರಣಿ ಗಳಾಗಿದ್ದರು.

ಮಹಾಸ್ವಾಮಿಗಳಾದ ಅಕ್ಷೋಭ್ಯತೀರ್ಥರಿಗೆ ಶ್ರೀ ಮದಾನಂದತೀರ್ಥ ರಿಂದ ಪಾಠವಾಗಿದ್ದರಿಂದ ಅವರಿಗೆ ಆಚಾರ್ಯ ಮಧ್ವರ 37 ಗ್ರಂಥಗಳಾದ "**ಸರ್ವಮೂಲ**"ವು ಕರತಲಾಮಲಕವಾಗಿತ್ತು. ಆಚಾರ್ಯರು ಗ್ರಂಥಗಳ ಸೂಕ್ಷ್ಮತೆ ಯನ್ನು ಪರಿಪೂರ್ಣವಾಗಿ ತಿಳಿಸಿ ಪಾಠವನ್ನು ಹೇಳಿದ್ದರು. "**ಶ್ರೀ ಮಾಧ್ವವಾಙ್ಮ ಯತಪಸ್ವಿ**" ಗ್ರಂಥದಲ್ಲಿ ಪುಟ 155ರಲ್ಲಿ ಗ್ರಂಥಕರ್ತರಾದ ಫಂಢರೀನಾಥ ಗಲಿಗಲಿಯವರು ಇದನ್ನು ಈ ರೀತಿ ಹೇಳಿದ್ದಾರೆ.

"ಗೋವಿಂದ ಶಾಸ್ತ್ರಿಗಳ ವಿಷಯವೈಮುಖ್ಯ ಅಧ್ಯಯನಾಭಿಮುಖ್ಯ, ಪ್ರಾಮುಖ್ಯಗಳನ್ನು ಕಂಡು ಸುಪ್ರೀತರಾದ ಗುರುಗಳು ಅವರಿಗೆ ತಮ್ಮ ಮುವತ್ತೇಳು ಗ್ರಂಥಗಳನ್ನು ಆಚೂಲ ಮೂಲವಾಗಿ ಪಾಠ ಹೇಳಿದ್ದರು. ಸನ್ಯಾಸಾಶ್ರಮವನ್ನಿತ್ತು "**ಆಕ್ಷೋಭ್ಯತೀರ್ಥ**" ಎಂದು ಅನ್ವರ್ಥಕ ಹೆಸರನ್ನಿತ್ತು ಅನುಗ್ರಹಿಸಿದರು. **ಯಾವ ಇಂದ್ರಿಯದಿಂದಲೂ ಯಾವ ವಿಷಯದಿಂದಲೂ ಎಂದೂ ಅವರ ಮನಸ್ಸು ಕ್ಷೋಭೆಗೊಳ್ಳುತ್ತಿರಲಿಲ್ಲ. ಆದುದರಿಂದ ಅವರಿಗೆ "ಅಕ್ಷೋಭ್ಯ" ಎಂದು ಆಚಾರ್ಯರು ಗುಣಾನುರೂಪವಾದ ನಾಮವನ್ನು ಕೊಟ್ಟಿದ್ದು ಸಾರ್ಥಕವೇ ಆಯಿತು.** ಅಕ್ಷೋಭ್ಯತೀರ್ಥರು ಆಚಾರ್ಯರಿಂದ ಕೇಳಿದ ಪಾಠವನ್ನು ಚೆನ್ನಾಗಿ ಬಾಯಿಪಾಠಮಾಡಿ ಎದೆಯಲ್ಲಿ ಮೂಡಿಸಿಗೊಂಡು ಬಿಟ್ಟಿದ್ದರು. ಅದನ್ನೆಲ್ಲ ಇಡಿಕಿಡಿಯಾಗಿ ಶ್ರೀ ಟೀಕಾರಾಯರಿಗೆ ಪಾಠಹೇಳಿದರು. ಶ್ರೀ ಜಯತೀರ್ಥರಿಗೆ ಬಂದ ಜ್ಞಾನ ಸಾಕ್ಷಾತ್ ಶ್ರೀ ಮದಾಚಾರ್ಯರ ಮುಖ ದಿಂದ ಬಂದದ್ದೆ. ಆ ಸರ್ವಜ್ಞರ ವಿದ್ಯಾಶರಧಿಯಿಂದ ತಮ್ಮ ಜ್ಞಾನಾಂಜಲಿ ಯಲ್ಲಿ ತುಂಬಿತಂದ ತತ್ವಾಮೃತವನ್ನು ಅಕ್ಷೋಭ್ಯತೀರ್ಥರು ಒಂದು ಹನಿಯೂ ಎಲ್ಲಿಯೂ ಸೋರದಂತೆ ಜಯತೀರ್ಥರೂಪ ಸತ್‌ಪಾತ್ರರಲ್ಲಿ ಹನಿಸಿದರು. ಆದುದರಿಂದಲೇ ಜಯತೀರ್ಥರು ಪ್ರಾಯಃ ತಮ್ಮ ಪ್ರತಿಯೊಂದು ಗ್ರಂಥದ ಪ್ರಾರಂಭದಲ್ಲಿ ಅಕ್ಷೋಭ್ಯತೀರ್ಥರ ಉಪಕಾರವನ್ನು ನೆನೆಯದೇ ಮುಂದುವರಿಯುವುದಿಲ್ಲ.

"ಅಕ್ಷೋಭ್ಯತೀರ್ಥ ಗುರುಣಾಶುಕವಚ್ಛಿಕ್ಷಿತಸ್ಯಮೇ"
"ಯ್ಯೈರಹಂ ಶುಕವದ್ಬಾಲ್ಯೇ ಶಿಕ್ಷಿತೋಸ್ಮ್ಯನು ಕಂಪಯಾ"

ಜಯತೀರ್ಥರಿಂದ ವಿದ್ಯಾರಣ್ಯರ ಜೊತೆಯಲ್ಲಿ ನಡೆದ ಶ್ರೇಷ್ಠ ವಾದವು ಶ್ರೀ ಮದಾನಂದತೀರ್ಥರ ವ್ಯಾಘ್ರ ಘರ್ಜನೆಯೇ, ಅಂತಯೇ ಸುಧೆಯಲ್ಲಿ ಮೊಳಗಿದ ಗಜ ಘೀಳಿಯನಾದ ಶ್ರೀ ಮದಾಚಾರ್ಯರದೇ ಇಂಥಹ ಜಯತೀರ್ಥರನ್ನು ವೇದಾಂತಸಾಮ್ರಾಜ್ಯಕ್ಕೆ ಕೊಡುಗೆಯನ್ನಿತ್ತ ಶ್ರೀ ಅಕ್ಷೋಭ್ಯ ತೀರ್ಥರಿಗೆ ಶ್ರೀಮದಾನಂದ ತೀರ್ಥರ ಸಂಪೂರ್ಣವಾದ ಅನುಗ್ರಹಾತಿಶಯ ವಿತ್ತೆಂಬುದರಲ್ಲಿ ಯಾವುದೇ ಎಳ್ಳಷ್ಟು ಸಂಶಯವಿಲ್ಲ. ಜಯತೀರ್ಥರ ಧ್ವನಿಯಲ್ಲಿ ಅನುಮಾನತೀರ್ಥರ ಪ್ರತಿಧ್ವನಿಯು ಹೊರ ಹೊಮ್ಮಿದ್ದು ಶ್ರೀ ಅಕ್ಷೋಭ್ಯತೀರ್ಥರ ಪುಣ್ಯ. ಇದಕ್ಕೆ ಪುಷ್ಟಿಯಾಗಿರುವುದು ಇಂತಿದೆ.

"ಯ್ಯೈರಹಂ ಶುಕವದ್ ಬಾಲ್ಯೆ ಶಿಕ್ಷಿತೋಽಸ್ಮಿ"

ಶ್ರೀ ಬಿ.ಎನ್.ಕೆ. ಶರ್ಮಾ ತಮ್ಮ "History of the Dvaita School of Vedanta" ಪುಟ 230ರಲ್ಲಿ ಅಕ್ಷೋಭ್ಯತೀರ್ಥರ ಬಗ್ಗೆ ಈ ರೀತಿ ಬರೆದಿದ್ದಾರೆ.

"It (Malakhed or Manyakheta, the Historic capital of the Rastrakutas) was here that he seems to have spent the closing years of his life devoting himself heart and soul to the training and instruction of his gifted disciple Jayathirtha, in all the niceties of Dvaita thought, Jayathirtha's affectionate regard for Akshobhya comes out in the warm tribute that he has paid him for all the affection and learning which his Guru had lavished upon him"

ಶ್ರೀ ಆಚಾರ್ಯ ಮಧ್ವರು ರಜತಪುರಿಯಲ್ಲಿ ತಮ್ಮ ಶ್ರೀಕೃಷ್ಣ ಮಠವನ್ನು ಸ್ಥಾಪಿಸಿ, ಶ್ರೀ ಕೃಷ್ಣನನ್ನು ಪ್ರತಿಷ್ಠಾಪಿಸಿ ಅಷ್ಟಯೋಗಿಗಳನ್ನು ನಿಯಮಿಸಿ, ನಿರಂತರ ಪೂಜೆಗೆ ವ್ಯವಸ್ಥಿತ ರೀತಿಯಲ್ಲಿ ಮಾಡಿದರು. ಈ ಅಷ್ಟಯೋಗಿಗಳೇ ಅಷ್ಟಮಠಾಧೀಶರಾಗಿ ಇಂದಿಗೂ ಅವರ ಪರಂಪರೆಯಲ್ಲಿ ಬಂದ ಯತಿಗಳು ಪರ್ಯಾಯವಾಗಿ ಪೂಜಾವನ್ನು ನಿರ್ವಹಿಸುತ್ತಿರುವರು. ಅಂತೆಯೇ, ಘಟ್ಟದ ಮೇಲಿಂದ ಬಂದ ಆಚಾರ್ಯರ ಶಿಷ್ಯ ಚತುರ್ಥರಾದ ಮಹಾಯತಿಗಳು ಮಹಾವಿದ್ವಾಂಸರಾದ ಶ್ರೀ ಪದ್ಮನಾಭತೀರ್ಥರು, ನಂತರ ಶ್ರೀ ನರಹರಿ ತೀರ್ಥರು, ತದ ನಂತರ ಮಾಧವತೀರ್ಥರು, ಹಾಗೂ ನಾಲ್ಕನೇಯವರಾದ

ಶ್ರೀ ಅಕ್ಷೋಭ್ಯತೀರ್ಥರುಗಳಿಗೆ ಬ್ರಹ್ಮಕರಾರ್ಚಿತ, ಸ್ವಯಂ ವ್ಯಕ್ತ ಶ್ರೀ ಮೂಲರಾಮ ದೇವರನ್ನು ಕ್ರಮವಾಗಿ ಒಬ್ಬರನಂತರ ಒಬ್ಬರು ಪೂಜಿಸುವ ಸೌಭಾಗ್ಯವನ್ನಿತ್ತು ಅಂತೆಯೇ ಅಪ್ಪಣೆ ಮಾಡಿದರು.

ಸತ್ಕಥಾ ಪುಟ 22ರಲ್ಲಿ ಮಾಧವತೀರ್ಥರು ನಾರಾಯಣ ತತ್ಪರರಾದುದ್ದನ್ನು ಈ ರೀತಿ ನಮೂದಿಸಿದೆ.

"ಇವರು (ಮಾಧವತೀರ್ಥರು) 17ವರ್ಷ ಸಂಸ್ಥಾನವನ್ನಾಳಿದರು. ಆಮೇಲೆ ಆನೆಗುಂದಿಯಲ್ಲಿ 1152ನೇ ವಿಕೃತಿ ಸಂವತ್ಸರದ ಭಾದ್ರಪದ ವದ್ಯ ಅಮಾವಾಸ್ಯೆ ದಿವಸ ಶ್ರೀರಾಮಧ್ಯಾನತತ್ಪರರಾದರು. ಆ ಕಾಲಕ್ಕೆ ಮುಸಲ್ಮಾನರ ಹಾವಳಿಯು ಬಹಳವಾಗಿದ್ದರಿಂದ ಭೀಮರಥೀ ನದಿಯ ದಂಡೆಯ ಮೇಲಿನ (ಖ್ಯಾಡ) ಮಣ್ಣೂರೆಂಬಲ್ಲಿ ಇವರ 2ನೇಯ ವೃಂದಾವನವಾಗಿದೆ.

"ಮಾಧ್ವವಾಙ್ಮಯತಪಸ್ವಿ" ಯಲ್ಲಿ ಪುಟ 152ರಲ್ಲಿ ಕೆಳಕಂಡಂತೆ ಹೇಳಿದೆ.

"ಇವರ (ಮಾಧವ ತೀರ್ಥರ) ವೃಂದಾವನವು ಮೊದಲು ಭೀಮರಥಿ ಯತೀರದಲ್ಲಿ ಶ್ರೀ ರಾಮ ಒತ್ತು ಎಂಬಲ್ಲಿ ಇತ್ತು. ಕಾಲಕ್ರಮೇಣ ಆ ಒತ್ತು ವೃಂದಾವನವಿದ್ದ ಸ್ಥಳವನ್ನು ಕೊರೆಯತೊಡಗಿತ್ತು. ಆ ಕಾಲದಲ್ಲಿ ಅಲ್ಲಿಗೆ ಬಂದ ಶ್ರೀಮದುತ್ತರಾದಿಮಠದ **ಶ್ರೀ ಸತ್ಯಪರಾಯಣತೀರ್ಥ** ಶ್ರೀಗಳವರಿಗೆ ಸ್ವಪ್ನವಾದುದರಿಂದ ಅವರು ಅದನ್ನು ತೆಗೆಯಿಸಿ ಮಣ್ಣೂರಗ್ರಾಮದಲ್ಲಿಯ ಶ್ರೀ ವೇದೇಶತೀರ್ಥರ ವೃಂದಾವನವಿದ್ದ ಸ್ಥಳಕ್ಕೆ ತಂದು ಶ್ರೀ ಮಾಧವ ತೀರ್ಥರ ವೃಂದಾವನವನ್ನು ಪುನಃ ಪ್ರತಿಷ್ಠಾಪನೆ ಮಾಡಿಸಿದರು".

ಶ್ರೀ ಅಕ್ಷೋಭ್ಯತೀರ್ಥ ಶ್ರೀಗಳವರು ತಮ್ಮ ಗುರುಗಳ ಬೃಂದಾವನವನ್ನು ಮಾಡಿ ಸಂಚಾರ ಕೈಗೊಂಡರು. ಅವರು ದೇಶಾದ್ಯಂತ ಸಂಚರಿಸಿ ಪರಮತ ಪಂಡಿತರನ್ನು ವಾದಗಳಲ್ಲಿ ಪರಾಜಯಗೊಳಿಸಿ ಪಲಾಯನ ಮಾಡಿಸಿದರು. ಹಾಗೇ ಸಂಚಾರ ಮಾಡುತ್ತ ಕಾಗಿನಿ ನದಿಯ ದಂಡೆಯ ಮೇಲಿದ್ದ ಮಳಖೇಡಕ್ಕೆ ಬಂದರು. ಆಗ ಆ ಊರಿನ ಕೆಲವು ಕುಹಿಕಿಗಳ ದಶೆಯಿಂದ ಊರಿನವರಿಂದ ಬಹಿಷ್ಕೃತರಾದ ರಂಗಣ್ಣಾ ಮತ್ತು ಧಾಮಣ್ಣಾ ಎಂಬ ಸಹೋದರರು ಶ್ರೀಗಳವರಲ್ಲಿ ಬಂದು ಸಾಷ್ಟಾಂಗನಮಸ್ಕಾರ ಮಾಡಿ ಸ್ವಾಮಿ! ನಾವು ಪರರಿಂದ ಅಪಹೃತವಾಗಿದ್ದ ರಾಜ್ಯವನ್ನು ಮರಳಿ ಪಡೆಯುವಲ್ಲಿ ಶಿಶುಹತ್ಯೆ ಮತ್ತು ಬ್ರಹ್ಮಹತ್ಯೆ ಮಾಡಿದ್ದೇವೆಂದು ಬಹಿಷ್ಕಾರ ಹಾಕಿರುವರು. ತಾವು ಕೃಪೆತೋರಿ ಬಹಿಷ್ಕಾರ ಮುಕ್ತರನ್ನಾಗಿ ಮಾಡಿ ಕೃಥಾರ್ಥರನ್ನಾಗಿ

ಮಾಡಬೇಕೆಂದು ದೈನ್ಯದಿಂದ ಪರಿಪರಿಯಾಗಿ ಬೇಡಿದರು. ಕರುಣಾಮಯಿಗಳು, ಆರ್ತ ಹೃದಯ ಪಾರಂಗತರು ಆದ ಮಹಸ್ವಾಮಿಗಳ ಮನಕರಗಿ ಅವರನ್ನು ಬ್ರಹ್ಮ ಹತ್ಯಾದೋಷದಿಂದ ಪಾರುಮಾಡಲು ನಿರ್ಧರಿಸಿದರು. ಅದಕ್ಕೂ ಮುಂಚೆ ಅವರನ್ನು ಪರೀಕ್ಷಿಸಲು ನೀವು ತೆಂಗಿನಮರ ಹತ್ತಿ ಧುಮುಕಿರಿ ಎಂದರು. ಆಗ ಅವರು ಹತ್ತಿ ಧುಮುಕಲು ಮುಂದಾಗಲು ಶ್ರೀಗಳವರು ಅವರನ್ನು ತಡೆದು ಏರಿದ್ದ ಮರದಿಂದ ಇಳಿಯಲು ಅಪ್ಪಣೆ ಮಾಡಿದರು. ಶ್ರೀ ರಾಮದೇವರಿಗೆ ಹಾಗೂ ನರಸಿಂಹದೇವರಿಗೆ ಮಾಡಿದ ಅಭಿಷೇಕ ತೀರ್ಥದಿಂದ ಅವರುಗಳ ತಲೆಯ ಮೇಲೆ ಪ್ರೋಕ್ಷಣೆ ಮಾಡಿ ಈ ಕ್ಷಣದಿಂದ ಬ್ರಹ್ಮ ಹತ್ಯಾದೋಶದಿಂದ ಉದ್ಭವಿಸಿದ್ದ ಪಾಪವೆಲ್ಲವೂ ನಾಶವಾಯಿತು. ಎಂದು ಹೇಳಿದರು. ಅಲ್ಲದೇ ಬಹಿಷ್ಕಾರ ಮುಕ್ತರಾಗಿರುವಿರಿ ಎಂದು ಅಪ್ಪಣೆ ನೀಡಿ ಅವರನ್ನು ಕೃತಾರ್ಥರನ್ನಾಗಿ ಮಾಡಿದರು. ಆದರೆ, ಕುಹಕಿಗಳ ಬಾಯಿಮುಚ್ಚಲಿಲ್ಲ. ಎಲ್ಲಾದರೂ ಉಂಟೇ? ತೀರ್ಥ ಪ್ರೋಕ್ಷಣೆಯಿಂದ ಬ್ರಹ್ಮಹತ್ಯಾನಾಶವಾಗುವುದೇ, ಕೊಲೆ ಮಾಡಿದವರನ್ನು ಈ ರೀತಿಯಲ್ಲಿ ಪರಿಶುದ್ಧಮಾಡಲಾಗುವುದೇ. ಆಗ ಶ್ರೀಗಳವರೆ ವಿಷಯ ತಿಳಿದು ಒಂದು ದಿನ ಒಂದು ಶುಭ್ರವಾದ ಬಿಳಿ ಬಟ್ಟೆಯನ್ನು ಕಪ್ಪು ಗೇರೆಣ್ಣೆಯಲ್ಲಿ ತೊಯಿಸುವಂತೆ ಎಲ್ಲರ ಸಮಕ್ಷಮ ಶಿಷ್ಯರಿಗೆ ಹೇಳಿದರು. ಹಾಗೆ ತೊಯಿಸಿದ ಬಟ್ಟೆಯನ್ನು ಚೆನ್ನಾಗಿ ಒಗೆಯಿರಿ ಮತ್ತು ಒಣಗಿಸಿರಿ ಎಂದು ಅವರ ಶಿಷ್ಯರಿಗೆ ಅಪ್ಪಣೆ ಮಾಡಿದರು. ಹಾಗೇ ಮಾಡಿದ ಶಿಷ್ಯರು ಆ ಬಟ್ಟೆಯು ಏನು ಮಾಡಿದರೂ ಬೆಳ್ಳಗಾಗಲಿಲ್ಲವೆಂದು ಬಂದು ಹೇಳಿದರು. ಆಗ ಎಲ್ಲರ ಸಮಕ್ಷಮ ಆ ಬಟ್ಟೆಗೆ ಹಿಂದಿನಂತೆ ಈಗಲೂ ಸಹ ಶ್ರೀ ರಾಮದೇವರ ಹಾಗೂ ನರಸಿಂಹದೇವರ ತೀರ್ಥವನ್ನು ಪ್ರೋಕ್ಷಿಸಿದರು. ನೋಡು ನೋಡುತ್ತಿದ್ದಂತೆಯೇ ಕಡು ಕಪ್ಪು ಆಗಿದ್ದ ಬಿಳಿ ಬಟ್ಟೆಯು, ಮೊದಲಿನಂತೆ ಸ್ವಚ್ಚವಾದ, ಶುಭ್ರವಾದ ಬಿಳಿಯ ಬಟ್ಟೆಯಾಗಿ ಪರಿವರ್ತನೆಯಾಯಿತು. ಅಲ್ಲಿದ್ದ ಸಜ್ಜನರಾದಿಯಾಗಿ ಎಲ್ಲರೂ ಮೂಕವಿಸ್ಮಿತರಾದರು. ಕುಹಕಿಗಳ ಬಾಯಿಗಳಿಗೆ ಬೀಗ ಜಡಿದಂತಾಯಿತು. ಇಂಥಹ ಪವಾಡ ಸದೃಶವಾದ ಕಾರ್ಯವೆಸಗಿದ ಮಹಾಸ್ವಾಮಿಗಳ ಖ್ಯಾತಿ, ಮಹಿಮೆ ದೇಶಾದ್ಯಂತ ಪಸರಿಸಿತು.

ಶ್ರೀ ಅಕ್ಷೋಭ್ಯತೀರ್ಥರ ಸಂಚಾರ ಕಾಲದಲ್ಲಿ ಮತ್ತೊಂದು ವಿಶೇಷ ನಡೆಯಿತು. ಭೀಮಾತೀರದಲ್ಲಿದ್ದ ರಾಜ್ಯದಲ್ಲಿ ಆಡಳಿತ ನಡೆಸುತ್ತಿದ್ದ ರಾಜನಿಗೆ ಇಬ್ಬರು ಹೆಂಡತಿಯರು. ಹಿರಿಯವಳಿಗೆ ಮಕ್ಕಳು ಇರಲಿಲ್ಲ. ಕಿರಿಯವಳಿಗೆ

ಬಹಳ ದಿನಗಳನಂತರ ಒಂದು ಗಂಡು ಕೂಸಾಯಿತು. ಹಿರಿಯವಳಿಗೆ ತಾನು ತನ್ನ ಗಂಡನ ಅನುರಾಗದಿಂದ ವಂಚಿತಳಾಗುವನೆಂದು ಬಗೆದು ಗುಪ್ತವಾಗಿ ಆ ಮಗುವಿಗೆ ವಿಷವಿಕ್ಕಿ ಸಾಯುವಂತೆ ಮಾಡಿದಳು. ಆದರೆ, ಯಾರ ಮುಖಾಂತರ ವಿಷವಿಕ್ಕಿ ಸಾಯಿಸಲಾಯಿತೋ ಆ ವ್ಯಕ್ತಿಯನ್ನು ಸಾಕ್ಷಿಗಳ ಕೊರತೆಯಿಂದ ಹಿಡಿಯಲಾಗಲಿಲ್ಲ. ಆಗ ಆಸ್ಥಾನದಲ್ಲಿ ವಿಶೇಷ ಸ್ಥಾನಮಾನ ವನ್ನು ಹೊಂದಿದ್ದ ಇಬ್ಬರು ಬ್ರಾಹ್ಮಣರು ತಾವು ಈ ರಹಸ್ಯವನ್ನು ಭೇಧಿಸುವುದಾಗಿ ಹೇಳಿದರು. ರಾಜನು ಒಪ್ಪಿಗೆಯನ್ನಿತ್ತನು. ಆ ಬ್ರಾಹ್ಮಣರು ಹಿರಿಯರಾಣಿ ಹಾಗೂ ಕಿರಿಯ ರಾಣಿಯರಿಬ್ಬರು ನಿರ್ವಾಣದಲ್ಲಿ ಬರುವುದು, ಯಾರು ಬರುವುದಿಲ್ಲವೋ ಅವರು ಕೊಲೆಮಾಡಿಸಿರುವುರು ಎಂದರು. ಆಗ ಹಿರಯರಾಣಿ ಬೆತ್ತಲೆ ಸಭಾಗೆ ಬರುವುದಾಗಿ ಹೇಳಿದಳು. ಆದರೆ ಕಿರಿಯ ರಾಣಿಯು ಈ ಷರತ್ತನ್ನು ನಿರಾಕರಿಸಿದಳು. ಈ ಕಡೆ ಮಗನು ಹೋದ, ಆ ಕಡೆ ಸಭಾ ಸದಸ್ಯರ ಮುಂದೆ ನಾಚಿಕೆ ಬಿಟ್ಟು ಹೀನಾಯವಾಗಿ, ಲಜ್ಜೆಗೆಟ್ಟು ಸಭಾಸದಸ್ಯರ ಮುಂದೆ ನಿಲ್ಲವುದೇ ಎಂದು ಯೋಚಿಸಿ ತನ್ನ ನಿರಾಕರಣೆ ಯನ್ನು ತಿಳಿಸಿದಳು. ಚಾಣಾಕ್ಷರಾದ ವಿಪ್ರದ್ವಯರು ವಿತ್ತ, ದ್ರವ್ಯ ಆಶೆಯಿಂದ ಮಾಡಿದರೂ ತಮ್ಮಿಂದ ಸರಿಯಾದ ಅಪರಾಧಿಯನ್ನು ತೋರಿಸಿ ಕೊಟ್ಟುವೆಂದು ತಿಳಿದು ಹಿರಿಯ ರಾಣಿಯೇ ತಪ್ಪಿತಸ್ಥಳೆಂದು ತೀರ್ಮಾನಿಸಿದರು. ರಾಜರು ಇವರನ್ನು ಸನ್ಮಾನಿಸಿ ಆ ಹಿರಿಯ ರಾಣಿಗೆ ಮರಣದಂಡನೆ ವಿಧಿಸಿದನು. ಆದರೆ ಅಲ್ಲಿಯ ಬ್ರಾಹ್ಮಣರು ಅಸೂಯ ಪರರಾಗಿ ಇವರನ್ನು ಹೇಗಾದರು ಮಾಡಿ ಅವರನ್ನು ಬೇರೆ ಮಾಡಬೇಕೆಂದು, ಪರೋಕ್ಷವಾಗಿ ಈ ಬ್ರಾಹ್ಮಣರು ಸ್ತ್ರೀ ಹತ್ಯೆಗೆ ಕಾರಣವೆಂದು ನಿರ್ಧರಿಸಿ, ಆ ಬ್ರಾಹ್ಮಣ ಸಮೂಹವು ಇವರಿಗೆ ಬಹಿಷ್ಕಾರ ಹಾಕಿದರು. ಮನನೊಂದ ಬ್ರಾಹ್ಮಣರು ಶ್ರೀ ಅಕ್ಷೋಭ್ಯತೀರ್ಥರು ಹಿಂದೆ ಬ್ರಹ್ಮಹತ್ಯದೋಶವನ್ನು ಪರಿಹರಿಸಿ, ಬಹಿಷ್ಕಾರವನ್ನು ನಿವಾರಣೆ ಮಾಡಿದವರು ಅವರನ್ನು ಕಂಡು ಅವರಲ್ಲಿ ಶರಣಾಗತರಾದರೆ ತಮಗೆ ಬಂದಿರುವ ಬಹಿಷ್ಕಾರ ನಿವೃತ್ತಿ ಯಾಗುವುದೆಂದು ಬಗೆದು ಶ್ರೀಗಳವರಲ್ಲಿ ಬಂದು ಶರಣಾಗತರಾದರು. ಇವರ ಚರಿತ್ರಾವನ್ನು ಸಾದ್ಯಂತ ತಿಳಿದು ಶ್ರೀಗಳವರು ಅಭಯ ನೀಡಿ, ಬಹಿಷ್ಕಾರವನ್ನು ಬಗೆಹರಿಸುವುದಾಗಿ ಹೇಳಿದರು. ಎಲ್ಲರ ಸಮಕ್ಷಮ ಆ ಬ್ರಾಹ್ಮಣರ ಮೇಲೆ ಶ್ರೀರಾಮ ನರಸಿಂಹದೇವರ ತೀರ್ಥವನ್ನು ಪ್ರೋಕ್ಷಣೆ ಮಾಡಿದರು. ಆಗ ನೋಡು ನೋಡುತ್ತಿದ್ದಂತೆಯೇ ಆ ಬ್ರಾಹ್ಮಣರು ತೇಜಃ ಪುಂಜಯುತರಾದರು. ಮಹಾಸ್ವಾಮಿಗಳ ಮಹಿಮೆ ಅತ್ಯದ್ಭುತ.

ಶ್ರೀ ಅಕ್ಷೋಭ್ಯತೀರ್ಥ ಶ್ರೀಪಾದಂಗಳವರು ಬರೆದ ಗ್ರಂಥಗಳ ವಿವರ ಅಷ್ಟಾಗಿ ತಿಳಿದು ಬಂದಿಲ್ಲ ಆದರೆ, "**ಸತ್ಕಥಾ**" ಪುಟ 24ರಲ್ಲಿ ಈ ರೀತಿ ಹೇಳಿದೆ.

ಶ್ರೀ ಅಕ್ಷೋಭ್ಯರು "**ಮಧ್ವತತ್ವಸಾರ ಸಂಗ್ರಹ**" ವೆಂಬುದೊಂದೇ ಗ್ರಂಥವನ್ನು ರಚಿಸಿರುವರು.

ಪುಟ 229ರಲ್ಲಿ "History of the Dvaita school of Vedanta" ದ "ಪ್ರಾಚೀನ ಟೀಕಾಕಾರರು" ಅಡಿಯಲ್ಲಿ ಅಕ್ಷೋಭ್ಯತೀರ್ಥರ ಶಿರೋನಾಮೆ ಯಲ್ಲಿ ಈ ರೀತಿ ಶ್ರೀ ಬಿ.ಎನ್.ಕೆ. ಶರ್ಮಾರವರು ಹೇಳಿದ್ದಾರೆ. (ಆಯ್ದ ಭಾಗಗಳು)

"His former name is Govinda Sastri. The S.K. attributes to him "Madhvatattva sara samgraha.....It was for probably a manual of Dvaita doctrine, to judge from the title.

...........Aksobhya figures as an outstanding personality in the history of his school.

"ಶ್ರೀ ಮಾಧ್ವ ವಾಙ್ಮಯತಪಸ್ವಿ" ಪುಟ 178ರಲ್ಲಿ ಈ ರೀತಿ ಹೇಳಿದೆ. ಶ್ರೀ ಅಕ್ಷೋಭ್ಯತೀರ್ಥರು ಬರೆದ ಗ್ರಂಥಗಳು ಉಪಲಬ್ಧವಿಲ್ಲ. ವೇದಸಾರಸ್ತೋತ್ರ ಎಂದು ಅವರು ರಚಿಸಿದ ಚಿಕ್ಕ ಸ್ತೋತ್ರವು ಅಚ್ಚಾಗಿದೆ. ಅವರ ಸ್ವಹಸ್ತಾಕ್ಷರ ದಿಂದ ಬರೆದ ಆಚಾರ್ಯರ ಸರ್ವಮೂಲಗ್ರಂಥದ ಒಂದು ತಾಡವಲಿ ಪ್ರತಿಯು ಶ್ರೀ ಆರ್ಯಅಕ್ಷೋಭ್ಯತೀರ್ಥರ ಮಠದಲ್ಲಿ ಇಂದಿಗೂ ಸುರಕ್ಷಿತವಾಗಿದೆ.

ಶ್ರೀಗಳವರು ಫಂಢರಾಪುರಕ್ಕೆ ಬಂದಾಗ ಒಂದು ವಿಚಿತ್ರ ವ್ಯಾಪಾರ ನಡೆಯಿತು. ದೈವಿಕ ಘಟನೆಯು ಆಶ್ಚರ್ಯ ರೀತಿಯಲ್ಲಿ ನಡೆಯಿತು. ಮಹಾಸ್ವಾಮಿಗಳು ಶ್ರೀ ಪಂಢರಾದೀಶನ ದರುಶನಮಾಡಿ ಮಲಗಿದ್ದಾಗ ಬೆಳಗಿನ ಜಾವದ ಸಮಯದಲ್ಲಿ ಫಂಢರಿನಾಥನು ಕಾಣಿಸಿಕೊಂಡು ಇದೇ ಊರಿನಲ್ಲಿ ಕುಶಲಕರ್ಮಿಯಾದವನು, ಫಂಢರಿನಾಥನ ಭಕ್ತನು ಆದ ಅಕ್ಕಸಾಲೆಯವನು ನನ್ನ ಮೂರ್ತಿಯನ್ನು ಸುಂದರವಾಗಿ ಕೆತ್ತುತ್ತಿರುವನು, ನೀವು ಅವನಲ್ಲಿ ಹೋಗಿ ತಂದು ಪೂಜೆ ಮಾಡುವುದು ಎಂದು ಅಪ್ಪಣೆ ಯಾಯಿತು. ಅಂತೆಯೇ ಅಕ್ಕಸಾಲಿಗನವನಾದ ಅನಂತ ತುಕ್ಕೋಜಿಯು ಸುಂದರಮೂರ್ತಿಯಾದ ಫಂಢರೀನಾಥನನ್ನು ರೂಪುಗೊಳಿಸುತ್ತಿರುವ ಕಾಲದಲ್ಲಿ ಪಾದವನ್ನು ಕೆತ್ತುತ್ತಿರುವಾಗ ಕಾಲಿನಿಂದ ರಕ್ತ ಹರಿಯಲು

ಶುರುವಾಯಿತು. ಆಗ ತುಕ್ಕೋಜಿಯು ಭಯಭೀತನಾಗಿ ತನ್ನ ಕೆತ್ತನೆಯ ಕೆಲಸವನ್ನು ಅಲ್ಲಿಗೆಯೇ ಬಿಟ್ಟನು. ಅಂದಿನ ರಾತ್ರಿ ಅವನಿಗೆ ಫಂಢರೀನಾಥನು ಸ್ವಪ್ನದಲ್ಲಿ ಕಾಣಿಸಿಕೊಂಡು "ನೀನು ಕೆತ್ತುತ್ತಿರುವ ನನ್ನ ವಿಗ್ರಹದಲ್ಲಿ ನಾನು ಸನ್ನಿಹಿತನಾಗಿರುತ್ತೇನೆ. ನೀನು ಅದನ್ನು ಯಾವುದೇ ಕಾರಣಕ್ಕೂ ಮುಟ್ಟದೇ ನಾಳೆ ಬೆಳಿಗ್ಗೆ ಈ ಊರಿಗೆ ಬಂದಿರುವ ಅಸಮಾನ್ಯ ತಪಸ್ವಿಗಳಾದ ಶ್ರೀ ಅಕ್ಷೋಭ್ಯತೀರ್ಥರಿಗೆ ಭಕ್ತಿಪೂರ್ವಕವಾಗಿ ಅರ್ಪಿಸುವುದೆಂದು ಆಜ್ಞಾಮಾಡಿ ದನು. ಆ ಅಕ್ಕಸಾಲಿಯು ತನ್ನ ಪುಣ್ಯವನ್ನು ತಾನೇ ಕೊಂಡಾಡುತ್ತ ಬೆಳಿಗಾಗುವುದರ ನಿರೀಕ್ಷೆಯಲ್ಲಿದ್ದನು. ಜಗನ್ಮಾನ್ಯರಾದ, ಯತಿ ಶ್ರೇಷ್ಠರಾದ ಅಕ್ಷೋಭ್ಯತೀರ್ಥರು ಪ್ರಾತಃ ವಿಧಿಯನ್ನು ಮುಗಿಸಿಕೊಂಡು ವಾದ್ಯ ವೈಭವ ಗಳಿಂದ ಆ ಅಕ್ಕಸಾಲೆಯ ಮನೆಗೆ ಬಂದರು. ರಾತ್ರಿ ಸ್ವಪ್ನವಾದಂತೆಯೇ, ಶ್ರೀಗಳವರು ಬಂದದನ್ನು ಕಂಡು, ಆ ಅಕ್ಕಸಾಲಿಯು ಹಾಗೂ ಮನೆ ಮಂದಿಯೆಲ್ಲ ಸಾಷ್ಟಾಂಗ ನಮಸ್ಕಾರವನ್ನು ಹಾಕಿ ತನಗೆ ಆದ ಸ್ವಪ್ನ ವೃತ್ತಾಂತವನ್ನು ಹೇಳಿದನು. ಅಲ್ಲದೇ ಫಂಢರೀನಾಥನ ಅಪ್ಪಣೆಯಂತೆ ಆ ವಿಗ್ರಹವನ್ನು ಮುಟ್ಟದೆ, ಸ್ವಾಮಿಗಳೇ ತೆಗೆದುಕೊಳ್ಳಲು ಹೇಳಿದನು. ಹಾಗೇ ಸಮರ್ಪಿಸಿದ ವಿಗ್ರಹವನ್ನು ವಾದ್ಯ ವೈಭವದಿಂದ ಶ್ರೀ ಅಕ್ಷೋಭ್ಯತೀರ್ಥರು ಶ್ರೀ ಮಠಕ್ಕೆ ತಂದರು. ಇಂತಹ ವೈಭವವನ್ನು ನೋಡಿದವರು ಹಾಗೂ ಆ ಅಕ್ಕಸಾಲಿ ತುಕೋಬನು ಎಂಥಹ ಪುಣ್ಯವಂತರು. ಶ್ರೀ ಅಕ್ಷೋಭ್ಯತೀರ್ಥರು ಮಠಕ್ಕೆ ವಿಗ್ರಹವನ್ನು ತಂದು ವೈಭವದಿಂದ ಪೂಜೆಮಾಡಿದರು. ಇಂದಿಗೂ ಶ್ರೀಮದುತ್ತರಾದಿಮಠದಲ್ಲಿ ರಾರಾಜಿಸುತ್ತಿದೆ. ಇವರ ಗುರುಗಳಾದ ಮಾಧವ ತೀರ್ಥರಕಾಲಕ್ಕೂ ಇಂಥಹದೇ ಘಟನೆ ನಡೆದು ಶ್ರೀ ಮಠಕ್ಕೆ ಬಂದ ವಂಶರಾಮದೇವರು ಸಹ ಇರುವುದು. ಇವುಗಳನ್ನು ಶ್ರೀ ಸತ್ಯಾತ್ಮತೀರ್ಥರು ಮಾಡುವ ಪೂಜಾ ಸಮಯದಲ್ಲಿ ನೋಡಬಹುದು. ಶ್ರೀ ವಂಶರಾಮ ದೇವರು ಶ್ರೀ ಮಾಧವತೀರ್ಥರ ಕಾಲದಲ್ಲಿ ಬಂದರೆ ಅವರ ಶಿಷ್ಯರಾದ ಶ್ರೀ ಅಕ್ಷೋಭ್ಯತೀರ್ಥರ ಕಾಲದಲ್ಲಿ ಶ್ರೀ ಪ್ರಸನ್ನ ವಿಠಲ ದೇವರ ವಿಗ್ರಹ ಬಂದಿತು. ಫಂಢರಾಪುರ ಭೀಮ (ಚಂದ್ರಭಾಗ) ನದಿಯ ದಂಡೆಯ ಮೇಲಿದೆ. ಇಲ್ಲಿ ಪಾಂಡುರಂಗನ ವಿಗ್ರಹವಲ್ಲದೆ ಶ್ರೀ ಮದುತ್ತರಾದಿ ಮಠದ ಶ್ರೀ ವೇದನಿಧಿ ತೀರ್ಥರ ಹಾಗೂ ಶ್ರೀ ಸತ್ಯಧ್ಯಾನತೀರ್ಥರ ವೃಂದಾವನಗಳಿವೆ. ಶ್ರೀ ಉತ್ತರಾದಿ ಮಠವು ನದಿಯ ಸನ್ನಿಹದಲ್ಲಿದೆ. ಅಲ್ಲದೆ ಶ್ರೀ ಕೋದಂಡರಾಮ ಹಾಗೂ ಶ್ರೀಲಕ್ಷ್ಮೀನಾರಾಯಣ ಮಂದಿರಗಳಿವೆ. ಫಂಢರಾಪುರದಲ್ಲಿ

ಚಂದ್ರಭಾಗ ತೀರ್ಥ, ಸೋಮತೀರ್ಥ ಮುಂತಾದವು ಇದೆ. ಇಲ್ಲಿ ನಾರದರ ಮಂದಿರವು ಇದೆ. ಒಂದೇ ಸ್ಥಳದಲ್ಲಿ 10 ಲಿಂಗಗಳಿವೆ. ಒಂದು "ಚಬೂತ್" ರಮೇಲೆ ಭಗವಂತನ ಚರಣ ಚಿಹ್ನೆ ಇದೆ. ಇದನ್ನು ವಿಷ್ಣು ಪಾದವೆಂದು ಕರೆಯುತ್ತಾರೆ. ಇಲ್ಲಿಯೇ ಗೋಪಾಲಜೀ, ಜನಾಬಾಯಿ, ಏಕನಾಥ, ನಾಮ ದೇವನ, ಜ್ಞಾನೇಶ್ವರ ಹಾಗೂ ತುಕಾರಾಮನ ಮಂದಿರಗಳಿವೆ.

ಶ್ರೀ ಅಕ್ಷೋಭ್ಯತೀರ್ಥರ ಕಾಲದಲ್ಲಿ ಈಗಿನಂತೆ ಅವರ ಸಂಸ್ಥಾನವು ದೊಡ್ಡದಾಗಿರಲಿಲ್ಲ. ಅಲ್ಲದೇ ಮಹಾಸ್ವಾಮಿಗಳಿಗೆ ಯಾವುದೂ ಬೇಕಾಗಿರಲಿಲ್ಲ. ವೈರಾಗ್ಯವೇ ಮೂರ್ತಿವೆತ್ತವರಂತೆ ಜ್ವಾಜಲ್ಯ ಮಾನವಾಗಿ ಕಂಗೊಳಿಸುತ್ತಿದ್ದರು. ಅಂತಹವರು ಸಂಚಾರಮಾಡುತ್ತ ವಿಜಯನಗರಕ್ಕೆ ಬಂದರು. ಆಗ ಅಲ್ಲಿ ಶ್ರೀ ವಿದ್ಯಾರಣ್ಯರು ಇದ್ದರು. ಶ್ರೀ ವಿದ್ಯಾರಣ್ಯರು ಶ್ರೀ ಶಂಕರಾಚಾರ್ಯರ ಪೀಳಿಗೆಯಲ್ಲಿ ಬಂದವರು. ಅವರು ವೇದಾಂತ, ವಾಕ್ಯಾರ್ಥಗಳಲ್ಲಿ ಪ್ರಾವಿಣ್ಯತೆಯನ್ನು ಹೊಂದಿದವರು. ಅಲ್ಲದೆ ರಾಜ, ಮಹಾರಾಜರಿಂದ ಪಂಡಿತರಾಗಿದ್ದವರು. ವಿಜಯನಗರದಲ್ಲಿ ಶ್ರೀ ವಿದ್ಯಾರಣ್ಯರು ಮಹಾರಾಜರಿಂದ ಮಾನ್ಯವನ್ನು ಹೊಂದಿದವರಾಗಿದ್ದರು. ಶ್ರೀ ಅಕ್ಷೋಭ್ಯತೀರ್ಥರು ವಿಜಯನಗರದಲ್ಲಿ ಮಹಾಮಹ ಉದ್ದಾಮ ಅದ್ವೈತ ಪಂಡಿತರನ್ನು ಪರಾಭವಗೊಳಿಸಿ ಶ್ರೀ ದ್ವೈತ ಮತದ ದುಂಧುಭಿಯ ಧ್ವನಿ ಯನ್ನು ನಭೋಮಂಡಲಕ್ಕೆ ತಲುಪಿಸಿದರು. ಉಳಿದವರೆಂದರೆ ಶ್ರೀವಿದ್ಯಾರಣ್ಯರು. ಅವರನ್ನು ತಮ್ಮ ಪ್ರಬಲತಮವಾದ ವಿದ್ವತ್ಪೂರ್ಣವಾದ ವಾಕ್ ಬಾಣಗಳಿಂದ ಮಣಿಸಬೇಕೆಂದು ಅವರಿಗೆ ವಾದಾಹ್ವಾನವನ್ನು ನೀಡಿದರು. ಈ ಸಂದರ್ಭದಲ್ಲಿ ಶ್ರೀ ಫಂಢರಿನಾಥಾಚಾರ್ಯ ಗಲಿಗಲಿಯವರು ತಮ್ಮ ಶ್ರೇಷ್ಠ ಕೃತಿಯಾದ ಶ್ರೀ ಮಾಧ್ವವಾಙ್ಮಯ ತಪಸ್ವಿಗಳಲ್ಲಿ ಪುಟ-159 ಮತ್ತು 160ರಲ್ಲಿ

"ತಮ್ಮನ್ನು (ವಿದ್ಯಾರಣ್ಯರು) ಸರ್ವಜ್ಞಮೂರ್ತಿಗಳು ಎಂದು ಬಗೆದ ವಿಜಯನಗರದ ಮಹಾರಾಜರ ಸಮಕ್ಷಮ ತಾವು ವಾದದಲ್ಲಿ ಸೋತು ಹೋದರೆ ಸಾಮ್ರಾಜ್ಯದ ಮೇಲಿನ ತಮ್ಮ ಭದ್ರ ಮುಷ್ಟಿಯೇ ಸಡಿಲಾಗಬಹುದೆಂಬ ಹೆದರಿಕೆಯು ಅವರಿಗಿತ್ತು. ಅವರು ಅಕ್ಷೋಭ್ಯತೀರ್ಥ ರ ವಾದದ ಆಹ್ವಾನವನ್ನು ಕಿವಿಯ ಮೇಲೆಯೇ ಹಾಕಿಕೊಳ್ಳಲಿಲ್ಲ. ಅಕ್ಷೋಭ್ಯತೀರ್ಥರು ಬಿಡಲಿಲ್ಲ. ಏನಾದರೂ ಮಾಡಿ ವಿದ್ಯಾರಣ್ಯರಂಥ

ಹೆಬ್ಬುಲಿಯೊಡನೆ ವಾಕ್ಯಾರ್ಥದ ಸಂಗ್ರಾಮಾಂಗಣದಲ್ಲಿ ಶಾರ್ದೂಲ ವಿಕ್ರೀಡಿತವನ್ನು ಅಡಿ ಮಧ್ವ ಮತದ ವಿಜಯ ಪತಾಕೆಯನ್ನು ವಿಜಯ ನಗರದಲ್ಲಿ ಹಾರಿಸಬೇಕೆಂದು ಹುರಿದುಂಬಿದ ಹಂಬಲವು ಅವರಲ್ಲಿ ಅತ್ಯುತ್ಕಟ ವಾಗಿತ್ತು. ಅವರು ಮತ್ತೂ ಒಂದು ಸಲ ವಾಕ್ಯಾರ್ಥಕ್ಕೆ ವಿದ್ಯಾರಣ್ಯರನ್ನು ತಮ್ಮ ಪಂಡಿತ ಶಿಷ್ಯರ ಮುಖಾಂತರ ನಿಮಂತ್ರಿಸಿದರು." ಎಂದು ಉಲ್ಲೇಖಿಸಿದ್ದಾರೆ.

ಆಗ ಶ್ರೀ ವಿದ್ಯಾರಣ್ಯರ ಶಿಷ್ಯರು ಹಾಗೂ ಅವರು ಅನುಯಾಯಿಗಳು ತಮ್ಮ ಸ್ವಾಮಿಗಳಾದರೋ ರಾಜಪೂಜಿತರಾದ ಯತಿಶ್ರೇಷ್ಟರು, ಅವರು ತಮ್ಮ ಸಮಾನರಾದವರಲ್ಲಿ ಮಾತ್ರ ವಾದ ಮಾಡುವರು. ಚಿಲ್ಲರೆ ಪಂಡಿತರೊಡನೆ ವಾದ ಮಾಡುವುದಿಲ್ಲ. ಅವರು ರಾಜಸನ್ಮಾನ ಹೊಂದಿದವರ ಜೊತೆಯಲ್ಲಿ ವಾದ ಮಾಡುವರು ಎಂದು ವಾದಾಹ್ವಾನವನ್ನು ತಿರಸ್ಕರಿಸಿದರು. ವೇದವೇದ್ಯರಾದ ಪಂಡಿತ ಪಾಮರರಿಂದ ವಂದಿತರಾದ ಶ್ರೀ ಅಕ್ಷೋಭ್ಯ ತೀರ್ಥರಿಗೆ ತೀವ್ರ ನಿರಾಶೆ ಉಂಟಾಯಿತು. ಅವರ ತಮ್ಮ ಛಲವನ್ನು ಇಮ್ಮಡಿ ಗೊಳಿಸಿದರು. ಸಮಯ ನಿರೀಕ್ಷಣೆಮಾಡುತ್ತಲಿದ್ದರು. ಅಲ್ಲಿಂದ ಮುಂದೆ ತುಂಗ, ಭಧ್ರಾನದಿಗಳ ಸಂಗಮವಾದ ಕೂಡಲಿಗೆ ಬಂದರು. ಇದು ಶಿವಮೊಗ್ಗೆ ಹತ್ತಿರವಿದೆ. ಇಲ್ಲಿಯ ಸಂಗಮ ನೋಡಲು ರಮ್ಯವಾಗಿದೆ. ಇಲ್ಲಿ ನರಸಿಂಹದೇವರ ದೇವಸ್ಥಾನವಿದೆ. ಅಲ್ಲದೇ, ಅದ್ವೈತಮಠವಾದ ಕೂಡಲಿ ಶೃಂಗೇರಿ ಸ್ವಾಮಿಗಳ ಶಾರದಾ ದೇವಿಯ ದೇವಸ್ಥಾನವಿದೆ. ತಮ್ಮ ಸಂಕಲ್ಪ ಸಾಧನೆಗಾಗಿ ಶ್ರೀ ಅಕ್ಷೋಭ್ಯತೀರ್ಥರು ಇಲ್ಲಿರುವ ಚಿಂತಾಮಣಿ ನರಸಿಂಹ ದೇವರನ್ನು ಆರಾಧಿಸ ತೊಡಗಿದರು. ಅವರ ತಪಸ್ಸಿನ ಫಲವಾಗಿ ಅವರ ಮನದಿಚ್ಛೆ ಪೂರೈಸಲು, ಶ್ರೀ ಚಿಂತಾಮಣಿ ನರಸಿಂಹದೇವರು ಒಂದು ಅವಕಾಶವನ್ನು ಕಲ್ಪಿಸಿದನು.

ಅಂದು ಒಳ್ಳೆಯ ಮಧ್ಯಾಹ್ನದ ಸಮಯ, ಒಂದು ಹೆಮ್ಮರ ಅದರ ಕೆಳಗೆ ಕುಳಿತು ಶ್ರೀಗಳವರು ಧ್ಯಾನಾಸಕ್ತರಾಗಿದ್ದಾರೆ. ಅವರು ಕಾವಿ ಶಾಟಿ ಹೊದ್ದು ಉಟ್ಟಿದ್ದಾರೆ. ಆಗ ಅನಿರಿಕ್ಷಿತವಾಗಿ ಮೇಲಿಂದ ಏನೋ ಕೆಳಗೆ ತಮ್ಮ ಉಡಿಯಲ್ಲಿ ಬಿದ್ದಂತಾಯಿತು. ಧ್ಯಾನ ಮಗ್ನರಾದ ಶ್ರೀಗಳವರು ಏನೆಂದು ನೋಡಲು ಕಣ್ಣು ತೆರೆದು ನೋಡಿದ್ದಾರೆ. ಆಗ ಅವರು ಕಂಡದ್ದು ಒಂದು ಆಶ್ಚರ್ಯವಾದ ಘಟನೆ. ತಲೆ ಎತ್ತಿ ನೋಡಿದರು ಒಂದು ಕೋತಿಯು ತಾವು ಕುಳಿತಿರುವ ಕೊಂಬೆಯ ಮೇಲೆ ಕುಳಿತಿದೆ. ತಮ್ಮ ಉಡಿಯಲ್ಲಿ ಎರಡು ನೆರಳೆ

ಹಣ್ಣಿನ ಗಾತ್ರದ ಶಾಲಿಗ್ರಾಮಗಳನ್ನು ಹಾಕಿದೆ. ಏನಿರಬಹುದು ಇದರ ಸೂಚನೆಯೆಂದುಕೊಳ್ಳುತ್ತಿರಲು, ಆನೆಗೊಂದಿಯ ಮಹಾರಾಜನು ಕೂಡಲಿಗೆ ಶ್ರೀಗಳವರಿದ್ದ ಸ್ಥಳಕ್ಕೆ ಬಂದನು. ಸ್ವಾಮಿಗಳವರ ತೇಜಃಪುಂಜ ವದನಾರ ವಿಂದವನ್ನು ಕಂಡ ಅವನಿಗೆ ಅವನ ತಿಳುವಳಿಕೆಗೆ ಬರದೆಯೇ ತಾನೇ ತಾನಾಗಿ ಅವರಲ್ಲಿ ಸಾಷ್ಟಾಂಗ ನಮಸ್ಕಾರವನ್ನು ಹಾಕಿದನು. ಆಗ ಮಹಾಸ್ವಾಮಿಗಳು ಅವನ ಮುಖವನ್ನು ನೋಡಿದರು. ಸಕಲ ಸೌಭಾಗ್ಯ ಗಳಿದ್ದರು ಅವನು ಚಿಂತಾಕ್ರಾಂತನಾಗಿರುವನೆಂದು ತಮ್ಮ ದಿವ್ಯ ಜ್ಞಾನದಿಂದ ಅರಿತರು. ಉಭಯ ಕುಶಲೋಪರಿಯಾದ ಮೇಲೆ ಶ್ರೀಗಳವರು ಅವನಿಗೆ ರಾಜಾ ನಿನ್ನ ಮನದ ಚಿಂತೆ ನಾವು ಅರಿತಿರುವೆವು. ನಿನಗ ಸರ್ವ ಸನ್ಮಂಗಳವನ್ನು, ಸಂತಾನ ಭಾಗ್ಯವನ್ನು ನಮ್ಮ ಶ್ರೀರಾಮ ನರಸಿಂಹದೇವರು ನೀಡುವರು ಎಂದು ಫಲಮಂತ್ರಾಕ್ಷತೆಯನ್ನು ಎರಡು ಸಾಲಿಗ್ರಾಮಗಳಲ್ಲಿ ಒಂದು ಸಾಲಿಗ್ರಾಮ ಸಹಿತ ರಾಜನು ಕೇಳುವ ಮುಂಚೆಯೇ ನೀಡಿದರು. ಮಹಾರಾಜನಿಗೆ ಆಶ್ಚರ್ಯದ ಮೇಲೆ ಆಶ್ಚರ್ಯ. ಮಹಾಸ್ವಾಮಿಗಳು ನನ್ನ ಮನದಲ್ಲಿದ್ದನ್ನು ಹೇಗೆ ತಿಳಿದರೆಂದು. ಆಗ ಅವರಲ್ಲಿ ಅತಿಶಯವಾದ ಭಕ್ತಿ ಯುಂಟಾಯಿತು. ತನ್ನ ಭಾಗ್ಯವನ್ನು ತಾನೇ ಕಂಡು ಪುಳಕಿತನಾದನು. ಮಹಾರಾಜನಿಗೆ ಒಂದು ವರ್ಷದೊಳಗಾಗಿ ಪುತ್ರೋತ್ಸವವಾಯಿತು. ಅವನು ಅಕ್ಷೋಭ್ಯತೀರ್ಥರಲ್ಲಿ ಬಂದು ಆ ಮಗುವನ್ನು ಅವರ ಚರಣಾರವಿಂದಗಳಲ್ಲಿ ಮಲಗಿಸಿ, ಸ್ವಾಮಿ ಎಲ್ಲವೂ ನಿಮ್ಮ ಕೃಪೆಯೆಂದು ಪರಿಪರಿಯಾಗಿ ಪ್ರಾರ್ಥಿಸಿ ದರು. ಅಲ್ಲದೇ ಅವರ ಮುಂದೆ ರತ್ನ, ಮುತ್ತು, ಹವಳ, ಹೊನ್ನುಗಳ ರಾಶಿಯನ್ನೇ ಸುರಿದನು.

ಶ್ರೀಗಳವರು ನಯವಾಗಿ ಮಹಾರಾಜ, ನಾವುಗಳು ಪರಮ ವಿರಕ್ತರು. ಈ ಹೊನ್ನು, ರತ್ನ ಇವುಗಳನ್ನು ತೆಗೆದುಕೊಂಡು ಮಾಡುವುದೇನಿದೆ. ನೀನು ಇದನ್ನು ವಾಪಸ್ಸು ತೆಗೆದುಕೊಂಡುಹೋಗು ಎಂದರು. ಸ್ವಾಮಿ, ಈ ದ್ರವ್ಯ, ಕನಕ, ರತ್ನ, ಮುತ್ತುಗಳನ್ನು ನಿಮಗಾಗಿಯೇ ಆನೆಯ ಮೇಲೆ ಹೇರಿಕೊಂಡು ತಂದಿರುವೆನು. ನಾನು ಈಗಾಗಲೇ ನಿಮಗಾಗಿ ಕೊಡಬೇಕೆಂದು ಸಂಕಲ್ಪ ಮಾಡಿರುವುದರಿಂದ ಇವನ್ನು ಮರಳಿ ನನ್ನ ಸಂಸ್ಥಾನಕ್ಕೆ ತೆಗೆದುಕೊಂಡು ಹೋಗೆನು ಎಂದನು. ಹಾಗಾದರೆ ದೈವಚಿತ್ತ, ಇವನ್ನು ನದಿಗೆ ಹಾಕೆಂದರು. ಆಗ ಮಹಾರಾಜನಿಗೆ ಏನು ಮಾಡಬೇಕೆಂದು ತೋರಲಿಲ್ಲ. ತಮ್ಮ ಪರಿವಾರ ದಲ್ಲಿದ್ದ ಪ್ರಮುಖರನ್ನು ಕರೆದು ವಿಚಾರ ಮಾಡಲಾಗಿ, ಅವರು ನದಿಗೆ ಹಾಕು

ಎಂದರೆ, ನದಿಗೆ ಯಾತ್ರಿಕರು ಬಂದು ಸ್ನಾನಮಾಡಲು ಅನುಕೂಲ ಕಲ್ಪಿಸುವಂತೆಂದು. ಎಂದರೆ ಆ ಧನ ಕನಕರಾಶಿಗಳಿಂದ ಕರಿಕಲ್ಲನ್ನು ಕೊಂಡು ಮೆಟ್ಟಿಲು ಕಟ್ಟಿಸುವುದು ಎಂದು ಭಾವಿಸತಕ್ಕದೆಂದು ತಿಳಿಯ ಹೇಳಿದರು. ಅಂತೆಯೇ, ಕರಿಕಲ್ಲಿನ ಮೆಟ್ಟಿಲುಗಳನ್ನು ಕಟ್ಟಿಸಿ ಸದ್ವಿನಿಯೋಗ ಮಾಡಿದನು. ಇದಲ್ಲದೇ, ಕೂಡಲಿಯಲ್ಲಿ ಶ್ರೀ ಅಕ್ಷೋಭ್ಯತೀರ್ಥರಿಗೆ ಒಂದು ಭವ್ಯವಾದ ಮಠವನ್ನು ಕಟ್ಟಿಸಿಕೊಟ್ಟನು.

ಈ ವೇಳೆಗೆ ಶ್ರೀ ವಿದ್ಯಾರಣ್ಯತೀರ್ಥರು ವಿಜಯನಗರದಿಂದ ಹೊರಟು ಶೃಂಗೇರಿಯಲ್ಲಿದ್ದರು. ವಿಜಯನಗರದ ಅರಸನಾದ ಹರಿಹರನ ಮಗ ಕುಮಾರ ಕೆಂಪರಾಯನು ಮುಳಬಾಗಿಲಿನಲ್ಲಿ ರಾಜ ಪ್ರತಿನಿಧಿಯಾಗಿ ಕಾರ್ಯ ವಹಿಸುತ್ತಿದ್ದನು. ಆಗ ಅಕ್ಷೋಭ್ಯತೀರ್ಥರು ಶೃಂಗೇರಿಗೆ ಹೋಗುವುದೆಂದು ನಿಶ್ಚಯಿಸಿದರು. ಇದನ್ನು ತಿಳಿದ ಆನೆಗೊಂದಿ ಮಹಾರಾಜನು ಶ್ರೀಗಳವರಿಗೆ ಪಲ್ಲಕ್ಕಿ ಸಮೇತ ಆನೆ, ಕುದುರೆ ಇತ್ಯಾದಿಗಳನ್ನು ಅವರ ಜೊತೆಗೆ ಕಳುಹಿಸಿದನು. ಶೃಂಗೇರಿಗೆ ಶ್ರೀಗಳವರು ತಲುಪುವ ವೇಳೆಯಲ್ಲಿಯೇ, ಕುಮಾರ ಕೆಂಪರಾಯನು ಸಹ ಶ್ರೀ ವಿದ್ಯಾರಣ್ಯರ ಬಳಿ ಇದ್ದನು. ಅಕ್ಷೋಭ್ಯ ತೀರ್ಥರು ಆಗ ರಾಜಗೌರವದಿಂದ ವಿದ್ಯಾರಣ್ಯರಲ್ಲಿ ಬಂದು ವಾದಾಹ್ವಾನ ವನ್ನು ನೀಡಿದರು. ಕುಮಾರ ಕೆಂಪರಾಯನು ಯುದ್ಧಾಹ್ವಾನವನ್ನು ಮಾತ್ರ ನೋಡಿದ್ದನು. ಈಗ ವಾದಾಹ್ವಾನವನ್ನು ನೋಡಿದನು. ಅವನಿಗೆ ತಮ್ಮ ಗುರು ಗಳಾದ ಶ್ರೀ ವಿದ್ಯಾರಣ್ಯರ ಮೇಲೆ ಎಲ್ಲೂ ಇಲ್ಲದ ಅಪಾರ ಗೌರವ ಹಾಗೂ ಗೆದ್ದೇ ಗೆಲ್ಲುವರೆಂಬ ನಂಬಿಕೆಯಾಗಿತ್ತು.

ವಿದ್ಯಾರಣ್ಯರಿಗೆ ರಾಜಕುಮಾರನೆದುರಿಗೆ ವಾದಾಹ್ವಾನವನ್ನು ತಿರಸ್ಕರಿಸು ವುದು ಆಗಲಿಲ್ಲ. ಅವರು ಆಹ್ವಾನವನ್ನು ಸ್ವೀಕರಿಸಿದರು. ಇಬ್ಬರು ಮಹಾವ್ಯಕ್ತಿ ಗಳು. ಒಬ್ಬರು ಶಂಕರಾಚಾರ್ಯರ ಸಂಸ್ಥಾನದ ಅಧಿಪತಿಗಳು, ಮತ್ತೊಬ್ಬರೋ ದ್ವೈತಸಾಮ್ರಾಜ್ಯದ ಪ್ರವರ್ತಕರಾದ ಶ್ರೀ ಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯರು ಹಾಗೂ ಮಹಾಸಂಸ್ಥಾನದ ಅಧಿನೇತರು. ಸಿಂಹ ಶಾರ್ದೂಲಗಳ ಕಾಳಗದಂತೆ ಇವರಿಬ್ಬರ ವಾದ ಸಮರಕ್ಕೆ ಸಜ್ಜಾಯಿತು. ಇಂತಹ ಉತ್ಕೃಷ್ಟವಾದ ಸಮರವನ್ನು ತನ್ನ ಊರಾದ ಮುಳಬಾಗಿಲಿನಲ್ಲಿಯೇ ಆಗಬೇಕೆಂದನು. ವಾದ ಭೂಮಿಯು ಮುಳಬಾಗಿಲಿಗೆ ಸ್ಥಳಾಂತರ ಗೊಂಡಿತು. ಇಂತಹ ಮಹತ್ತರವಾದ ವಾದ ಸಮರವನ್ನು ಸಮರ್ಪಕ

ರೀತಿಯಲ್ಲಿ ನಡೆಯಲು ತಕ್ಕ ಏರ್ಪಾಟನ್ನು ಮಾಡಿಸಿದನು. ದೇಶ ವಿದೇಶದ ರಾಜ ಮಹಾರಾಜರಿಗೆ, ಪಂಡಿತರಿಗೆ, ಗಣ್ಯಾದಿಗಣ್ಯರಿಗೆ ಆಮಂತ್ರಣ ಕಳುಹಿಸಿದನು.

ಈ ದಂದ್ವ ವಾದ ಯುದ್ಧದ ಜಯಾಪಜಯವನ್ನು ನಿರ್ಣಯಿಸಲು ಸರಿಯಾದವರು ಯಾರೆಂದು ಜಿಜ್ಞಾಸೆ ಉಂಟಾಗಲು, ವೇದವೇದಾಂತ ಪಂಡಿತರು, ಶ್ರೇಷ್ಠಯತಿಗಳು ಹಾಗೂ ದ್ವೈತ, ಅದ್ವೈತ ದವರಲ್ಲದವರು ಆದವರನ್ನು ನೇಮಿಸಲು ವ್ಯವಸ್ಥೆಮಾಡುವ ಕಾರ್ಯ ಎಲ್ಲರ ಮುಂದೆ ತಲೆ ಎತ್ತಿತು. ಉಭಯರಿಗೂ ಸಮ್ಮತಿಯಾಗುವ ಒಬ್ಬರನ್ನು ನಿಶ್ಚಯಿಸಿತು. ಅವರು ಶ್ರೀ ವೇದಾಂತದೇಶಿಕರು. ವಿಶಿಷ್ಠಾದ್ವೈತದ ಗುರುಗಳು. ಅವರು ಶ್ರೀ ವಿದ್ಯಾರಣ್ಯರ ಸಹಪಾಠಿಗಳು, ಬಾಲ್ಯದಿಂದಲೂ ಅವರ ಸ್ನೇಹಿತರು. ಇದನ್ನು ತಿಳಿದೂ ಶ್ರೀ ಅಕ್ಷೋಭ್ಯತೀರ್ಥರು ತಮ್ಮ ಗುರುಗಳಾದ ಆನಂದತೀರ್ಥರ ಆಶೀರ್ವಾದ ಅನುಗ್ರಹದ ಭರವಸೆಯನ್ನಿಟ್ಟುಕೊಂಡು ವಾದಕ್ಕೆ ಸಹಮತ ವನ್ನಿತ್ತು ಶ್ರೀ ವೇದಾಂತದೇಶಿಕರ ನಿರ್ಣಯಕ್ಕೆ ಬದ್ಧರೆಂದು ಒಪ್ಪಿದರು.

ಮೂರು ಮತಗಳ (ತ್ರಿಮತಸ್ಥರು) ಪಂಡಿತರ ಮುಂದೆ ವಾಕ್ಯಾರ್ಥ ಮಾಡಬೇಕು. ಅದು ಲೇಖಬದ್ಧವಾದ ವಾಕ್ಯಾರ್ಥಮಾಡಬೇಕು. ಹಾಗೆ ಮಾಡಿದ್ದನ್ನು ಬರೆದು ವೇದಾಂತ ದೇಶಿಕರಿಗೆ ಕಳುಹಿಸಬೇಕೆಂದು ಎಲ್ಲರ ಸಮಕ್ಷಮ ನಿರ್ಧರಿಸಲಾಯಿತು. ಅಂತೆಯೇ ಹಂಚು-ಕಲ್ಲು ಬೆಟ್ಟದ ಮೇಲೆ ಇಬ್ಬರು ಯತಿಗಳು ತಮ್ಮ ಶಿಷ್ಯರಾದಿ ಅನುಯಾಯಿಗಳ ಜೊತೆ ಬಿಡಾರ ಹೂಡಿದರು. ವಾಕ್ಯಾರ್ಥಕ್ಕೆ ಮುಂಚೆ ಶ್ರೀಗಳಿಬ್ಬರು ತಾವು ಇಳಿದು ಕೊಂಡಿದ್ದ ಗುಹೆಗಳಲ್ಲಿ ತಮ್ಮ ತಮ್ಮ ಆರಾಧ್ಯ ದೈವ, ಇಷ್ಟದೈವಗಳನ್ನು ಮನಃ ಪೂಜಿಸಿದರು. ಶ್ರೀ ಅಕ್ಷೋಭ್ಯತೀರ್ಥರು ಶ್ರೀ ಮದಾಚಾರ್ಯರರಲ್ಲಿ ವಿಶೇಷ ಭಕ್ತಿ ಪೂಜೆ ಮಾಡಿದರು. ಈಶ್ವರನ ದೇವಸ್ಥಾನವಿರುವ ಹಾಗು ಅದರ ಮುಂಭಾಗದಲ್ಲಿರುವ ಗುಹೆಯಲ್ಲಿ ಅಕ್ಷೋಭ್ಯತೀರ್ಥರು ಉಳಿದುಕೊಂಡಿ ದ್ದರು. ಅದರ ಸನ್ನಿಹದಲ್ಲಿಯೇ ಇರುವ ಗುಹೆಯಲ್ಲಿ ಶ್ರೀ ವಿದ್ಯಾರಣ್ಯರು ಉಳಿದುಕೊಂಡಿದ್ದರು. ಒಳ್ಳೆ ಶುಭ ಘಳಿಗೆಯಲ್ಲಿ ಮಹಾರಾಜರುಗಳ ಹಾಗೂ ಪಂಡಿತರ, ಹಾಗೂ ವಿದ್ವಾಂಸರ ಸಮ್ಮುಖದಲ್ಲಿ ವಾಕ್ಯಾರ್ಥ ಪ್ರಾರಂಭ ವಾಯಿತು. ಯಾರೇನು ಸಾಮಾನ್ಯರೇ. ಅವರುಗಳು ಮಾಡಿದ ವಾಕ್ಯಾರ್ಥ ವನ್ನು ಪೂರ್ವದಲ್ಲಿ ಹೇಳಿದಂತೆ ಕರಣೀಕರು ಬರೆದು ಸಿದ್ಧಪಡಿಸಿದ್ದರು.

ಅವುಗಳನ್ನು ಶ್ರೀ ವೇದಾಂತ ದೇಶಿಕರಿಗೆ (ವೆಂಕಟನಾಥರಿಗೆ) ಕಳುಹಿಸುವ ಮುಂಚೆ ಶ್ರೀ ಅಕ್ಷೋಭ್ಯತೀರ್ಥರ ಹಾಗೂ ಶ್ರೀ ವಿದ್ಯಾರಣ್ಯರ ಹಸ್ತಾಕ್ಷರವನ್ನು ಪಡೆಯಲಾಗಿತ್ತು. ಆಮೇಲೆ ಅವನ್ನು ವೇದಾಂತ ದೇಶಿಕರ್‌ರಿಗೆ ಕಳುಹಿಸ ಲಾಯಿತು.

ಶ್ರೀ ವೇದಾಂತ ದೇಶಿಕರ್‌ರವರು ಎರಡು ಪಕ್ಷಗಳ ಉಕ್ತಿಯನ್ನು ಸರಿಯಾಗಿ ಪರಾಮರ್ಶ ಮಾಡಿ ತಮ್ಮ ನಿರ್ಣಯವನ್ನು ಒಂದು ಪದ್ಯರೂಪ ವಾಗಿ ಬರೆದು ಕೊಟ್ಟು ಕಳುಹಿಸಿದರು. ಇದೇ ಆ ಸುಪ್ರಸಿದ್ಧ ಪದ್ಯವು;

ಅಸಿನಾ ತತ್ವಮಸಿನಾ ಪರಜೀವಪ್ರಭೇ ದಿನಾ ।
ವಿದ್ಯಾರಣ್ಯ ಮಹಾರಣ್ಯ ಮಕ್ಷೋಭ್ಯ ಮುನಿರಚ್ಛಿನತ್ ॥

ಜೀವ ಬ್ರಹ್ಮದ ಭೇದವನ್ನು ಪ್ರತಿಪಾದಿಸುವ 'ತತ್ವಮಸಿ' ಎಂಬ ಖಡ್ಗದಿಂದ ವಿದ್ಯಾರಣ್ಯರೆಂಬ ದೊಡ್ಡ ಅರಣ್ಯವನ್ನು ಅಕ್ಷೋಭ್ಯರೆಂಬ ಮುನಿಗಳು ಕಡಿದು ಹಾಕಿದರು" (ಮಾಧ್ವವಾಜ್ಞಯ ತಪಸ್ವಿಗಳು ಪುಟ171)

ಇದೇ ಪದ್ಯವನ್ನು ಶ್ರೀ ಬಿ.ಎನ್.ಕೆ. ಶರ್ಮಾರವರು History of the Dviata School of Vedanta ದಲ್ಲಿ ಪುಟ 228 ರಲ್ಲಿ ನಮೂದಿಸಿದ್ದಾರೆ. (Relevent Portion)

"It is said to have been referred to Vedanta Desika for arbitration; and he is reported to have given his verdict in favour of Akshobhya... off quoted in traditional circles"

ವಿದ್ಯಾರಣ್ಯರ ಪರಾಜಯವನ್ನು ಬಹು ಸುಂದರವಾಗಿ ವಿಶಿಷ್ಟಾದ್ವೈತ ಮತದ ಪ್ರಕಾಂಡ ಪಂಡಿತರು, ವಿದ್ವಾಂಸರು ಆದ ಶ್ರೀ ದೊಡ್ಡಯ್ಯಾಚಾರ್ಯರು ಅವರ "ವೇದಾಂತಕ ದೇಶಿಕ ವೈಭವ ಪ್ರಕಾಶಿಕಾ" ದಲ್ಲಿ ಈ ರೀತಿ ಬರೆದಿದ್ದಾರೆ

"ಕದಾಚಿದಕ್ಷೋಭ್ಯ ಮುನೇಶ್ಚ ವಿದ್ಯಾ ।
ರಣ್ಯಸ್ಯ ಜಾತಂ ಬಹುಳಂ ವಿವಾದಂ ॥
ವಿಲಖ್ಯ ಭೂಪೋ ವಿಭುದಾಯ ಯಸ್ಮೈ।
ಸಂಪೇಕ್ಷಯಾಮಾಸ ತಮಾಶ್ರಯೇ ಹಂ॥
ತತ್ವಮನಾಸಿನಾ ತಂ ವಿದ್ಯಾರಣ್ಯಂ ಮುನಿಸ್ತದಾಕ್ಷೋಭ್ಯಃ
ಅಚ್ಛಿನಿದತ್ಯವದ್ಯದಃ ತಂ ಸೇವೆ ತತ್ವ ನಿರ್ಣಯೇ ಚತುರಂ॥

"ಅಕ್ಷೋಭ್ಯತೀರ್ಥರು ವಿದ್ಯಾರಣ್ಯರನ್ನು ತತ್ವಮಸಿ ಎಂಬ ಕೊಡಲಿಯಿಂದ

ಕಡಿದು ಹಾಕಿದರು. ಎಂದು ನಿರ್ಣಯವನ್ನು ಕೊಟ್ಟ ವೇದಾಂತ ದೇಶಿಕರಿಗೆ ನನ್ನ ನಮಸ್ಕಾರ" **(ಮಾಧ್ವ ವಾಙ್ಮಯ ತಪಸ್ವಿಗಳು ಪುಟ–112)**

ಈ ಪ್ರಸಂಗವನ್ನು ಈ ರೀತಿ

"ಮಿಥ್ಯಾವಾಧೀಭ ಸಂಸತ್ತ್ರಕಟಿತ ವಚನಾಟೋಪ ಸಿಂಹ ಸ್ವನಸ್ಯ|
ಕ್ಷೋಣೀಶದ್ವಾರ ದೇಶಾಧ್ಯುಷಿತ ನಿಜ ಜಯಾಪೂರಿತ ಶಾಂತರಸ್ಯ
ಅಕ್ಷೋಭ್ಯಾಖ್ಯಸ್ಯ ಭಿಕ್ಷೋ : ಪಥಯತಿ ಜಮಿತಾಮುತ್ತ ಮಾರಣ್ಯವಾದೇ
ವೇದಾಂತಚಾರ್ಯ ನಾಮ್ನಾ ವಿರಚಿತಜಯ ಪದ್ಯಾತ್ಮಕೋಽಯಂ ನಿಬಂಧಃ"
ಎಂದು ಶ್ರೀ ಸತ್ಯನಿಧಿವಿಲಾಸದಲ್ಲಿ ಹೇಳಿದೆ. ಸತ್ಯನಿಧಿವಿಲಾಸ ಪುಟ–54.

"ದಿಗ್ವಿಜಯಕ್ಕೆ ಹೊರಟ ಅಕ್ಷೋಭ್ಯತೀರ್ಥರು ತಮ್ಮ ಸ್ಫೂರ್ತಿವಚನಗಳ ಸಿಂಹಘರ್ಜನೆ ಮಾಡಿದರು. ಮಿಥ್ಯಾವಾದ ಸಲಗಗಳು ಪಲಾಯನ ಮಾಡಿದವು. ರಾಜದ್ವಾರಗಳಲ್ಲಿ ಇವರ ಕೀರ್ತಿ ಘೋಷಣೆಯಿಂದ ಎಲ್ಲ ದಿಕ್ಕುಗಳು ಪೂರ್ಣವಾದವು. ವಿದ್ಯಾರಣ್ಯರೂ ಇವರೊಂದಿಗೆ ವಾದಕ್ಕಿಳಿದು ಸೋತು ಹೋದರು. ವೇದಾಂತ ದೇಶಿಕರು ಅಲ್ಲಿ ನಿರ್ಣಾಯಕರು.

ಈ ಅಪೂರ್ವವಾದ ಘಟನೆಯನ್ನು ಕುಮಾರ ಕೆಂಪರಾಯನು ಮತ್ತು ಆನೆಗೊಂದಿಯ ರಾಜನು ಶಿಲಾಶಾಸನ ಕೆತ್ತಿಸಿ, ಆ ಜಾಗದಲ್ಲಿ ಜಯಸ್ತಂಭ ವನ್ನು ನೆಟ್ಟು ಯತಿ ಶ್ರೇಷ್ಠರ ವಾಕ್ಯಾರ್ಥ ಕುರಿತಂತೆ ವೇದಾಂತ ದೇಶಿಕರ ನಿರ್ಣಾಯಕ ಪದ್ಯವನ್ನು ತಮಿಳು ಮತ್ತು ಕನ್ನಡ ಲಿಪಿಯಲ್ಲಿ ಬರೆಸಿರುತ್ತಾರೆ. ಕಿಡಿಗೇಡಿಗಳು ಅದನ್ನು ಅಳಿಸಲು ಇತ್ತೀಚೆಗೆ ಪ್ರಯತ್ನವು ಪಟ್ಟಿದ್ದಾರೆಂದು ತಿಳಿದು ಬರುತ್ತದೆ. Mysore Archeological Annual Report dated 30.06.1896ರಲ್ಲಿ ಈ ರೀತಿ ನಮೂದಿಸಿದೆ.

At Mulabgal an inscription in Grantha characters on a boulder was brought to notice which appears to record the fact of refutation of Vidyaranya by Akshobhya Tirtha in some public disputation. But the inscription has been lately purposely destroyed so that only few letters remain visible. The above account of its contents is given by persons who saw before it was damaged and who had made a copy of it" -By Mr. L. Rice, C.I.E.

ಇವೆಲ್ಲದರಿಂದ ನಿರ್ವಿವಾದವಾಗಿ ಅ) ಶ್ರೀ ಅಕ್ಷೋಭ್ಯತೀರ್ಥರಿಗೂ ಹಾಗೂ ಶ್ರೀ ವಿದ್ಯಾರಣ್ಯರಿಗೂ ವ್ಯಾಕ್ಯಾರ್ಥವಾಗಿದ್ದು ಆ) ಅದರಲ್ಲಿ ಶ್ರೀ ಅಕ್ಷೋಭ್ಯ

ತೀರ್ಥರು ಜಯಗಳಿಸಿದ್ದು ಇ) ಕೊನೆಯದಾಗಿ ವೇದಾಂತ ದೇಶಿಕರವರು ಸ್ಪಷ್ಟವಾಗಿ, ನಿರ್ಣಾಯಕವಾಗಿ ಅಕ್ಷೋಭ್ಯತೀರ್ಥರು ವಾಕ್ಯಾರ್ಥದಲ್ಲಿ ಜಯ ಗಳಿಸಿದ್ದನ್ನು ಲಿಖಿತವಾಗಿ ಹೇಳಿದ್ದು ತಿಳಿದುಬರುತ್ತದೆ. ಇದನ್ನು ಮಾಧ್ವ ವಾಙ್ಮಯ ಜಗತ್ತಿನಲ್ಲಿ ಸುವರ್ಣಾಕ್ಷರಗಳಿಂದ ಬರೆಯುವಂಥಹದು. (ಇದನ್ನು ಬರೆಯಲು ಬಹಳಷ್ಟು ಮಾಧ್ವವಾಙ್ಮಯ ತಪಸ್ವಿ–ಶ್ರೀಪಂಢರೀನಾಥಚಾರ್ಯ ಗಲಗಲಿಯಿಂದ ಎರವಲು ಪಡೆದಿದ್ದೇನೆ. ಅವರಿಗೆ ಕೃತಜ್ಞತೆಗಳು) ಅಕ್ಷೋಭ್ಯರ ಮಹತ್ಸಾಧನೆ ಎಂದರೆ ಮಾಧ್ವವಾಙ್ಮಯಕ್ಕೆ ಶ್ರೀ ಜಯತೀರ್ಥರಂಥ ಸಮರ್ಥ ರಾದ, ಚತುರಸ್ರ ಪಾಂಡಿತ್ಯಪ್ರಭಾ ಗಿರಿ ಶಿಖರದಂತಿದ್ಧ ಯತಿ ಚಕ್ರವರ್ತಿ, ಟೀಕಾಚತುರಾಗ್ರೇಸರನ್ನು ನೀಡಿದ್ದು. ಶ್ರೀಮಾಧ್ವರ ಗ್ರಂಥಗಳಿಗೆ ಅವರ ಮನದಲ್ಲಿದ್ದದ್ದನ್ನು ತತ್ವಜ್ಞಾನ ಪ್ರಪಂಚಕ್ಕೆ ಪ್ರಕಾಶ ಪಡಿಸಿದ ಮಹಾನ್ ಯತಿಗಳು ಶ್ರೀ ಜಯತೀರ್ಥರು.

ಶ್ರೀ ಅಕ್ಷೋಭ್ಯತೀರ್ಥರು, ತಮ್ಮ ನಂತರ ಮಹಾಸಂಸ್ಥಾನವಾದ ಶ್ರೀಮದುತ್ತ ರಾದಿ ಮಠವನ್ನು ನಿರ್ವಹಿಸಲು ಸೂಕ್ತರಾರೆಂದು ಅವರ ಮನಸ್ಸಿಗೆ ಬಂತು. ತಮ್ಮನ್ನು ತಾವೇ ಸಮಾಧಾನ ಮಾಡಿಕೊಳ್ಳುತ್ತಾ ತಮ್ಮ ಮೂಲ ರಾಮನು ಹಾಗೂ ಗುರುಗಳಾದ ಆನಂದತೀರ್ಥರೇ ಮಾರ್ಗ ತೋರಿಸುವರೆಂದು ಕೊಂಡರು. ರಾತ್ರಿ ಸ್ವಪ್ನದಲ್ಲಿ ತೇಜೋಮಯ ಮೂರ್ತಿಗಳು, ಜ್ಞಾನಾನಂದ ಸ್ವರೂಪರು ಆದ ಶ್ರೀ ಮಧ್ವರು ಕಾಣಿಸಿಕೊಂಡು ಭೀಮಾನದಿಯ ತೀರದಲ್ಲಿ ಅಶ್ವಾರೋಹಿಯೊಬ್ಬನು ಅಶ್ವದ ಮೇಲೆಯೇ ಆಸೀನನಾಗಿ ಪಶುವು ಬಾಯಿಯೊಡ್ಡಿ ನೀರನ್ನು ಕುಡಿಯುವಂತೆ ಕುಡಿಯುವನು. ನಿಮ್ಮ ಉತ್ತರಾಧಿ ಕಾರಿಯಾಗಲು ಅವನೇ ಸರ್ವವಿಧದಲ್ಲೂ ಯೋಗ್ಯನು. ಅವನಿಗೆ ಸಂಸ್ಥಾನಾಧಿ ಪತ್ಯವನ್ನು ಕೊಡುವುದು ಎಂದು ಸೂಚಿಸಿದರು. ಅಕ್ಷೋಭ್ಯತೀರ್ಥರು ಎಂದಿನಂತೆ ಸ್ನಾನಾಹ್ನೀಕಕ್ಕೆ ಭೀಮಾನದಿಗೆ ಹೋದರು. ಆಗ ಅವರು ಕಂಡದ್ದು ಅವರಿಗೆ ಆಶ್ಚರ್ಯವುಂಟುಮಾಡಿತು. ಒಬ್ಬ ರಾವುತನು ಕುದುರೆಯ ಬೆನ್ನೇರಿ ಕುಳಿತಿದ್ದಾನೆ. ಕುದರೆಯನ್ನಿಳಿಯದೇ ಹಾಗೆಯೇ ಪಶುವಿನೋಪಾದಿಯಲ್ಲಿ ನೀರನ್ನು ಕುಡಿಯುತ್ತಿದ್ದಾನೆ. ಅವನು ಸ್ವಾಮಿಗಳ ಉಪಸ್ಥಿತಿಯನ್ನು ಗಮನಿಸಲೇ ಇಲ್ಲ. ಆಗ ಸ್ವಾಮಿಗಳು ಆ ರಾವುತನನ್ನು ಉದ್ದೇಶಿಸಿ "ಕಿಂ ಪಶುಃ ಪೂರ್ವ ದೇಹೆ" ಎಂದರು. ಆಗ ರಾಹುತನಿಗೆ ತನ್ನ ಪೂರ್ವಜನ್ಮದ ಸ್ಮರಣೆ ಉಂಟಾಯಿತು. ಶ್ರೀಮದಾನಂದತೀರ್ಥರು ಒಮ್ಮೆ ತಮ್ಮ ಶಿಷ್ಯರಿಗೆ ಪಾಠವನ್ನು ಹೇಳುತ್ತಿರುವಾಗ, ಶಿಷ್ಯರು ಕುತೂಹಲಕ್ಕಾಗಿ ಸ್ವಾಮಿ! ತಾವು ಬರೆದಿರುವ ಗ್ರಂಥ ಗಳಿಗೆ ಟೀಕೆಯನ್ನು ಬರೆಯುವವರಾರು ಮತ್ತು ಪರಮತ ನಿರಾಕರಣೆ ಮಾಡುವವರಾರೆಂದು ಪ್ರಶ್ನಿಸಿದರು. ಪ್ರಶ್ನಿಸಿದ ಶಿಷ್ಯರಲ್ಲಿ ತಮ್ಮಲ್ಲೊಬ್ಬರನ್ನು

ತಮ್ಮ ಗುರುಗಳು ಆರಿಸಿ ಮುಂದುವರೆಸಲು ಹೇಳುವರೆಂದು ಭಾವಿಸಿದ್ದರು. ಆದರೆ ಗುರುಗಳಾದ ಶ್ರೀ ಮಧ್ವರು ತಕ್ಷಣವೇ ಅಲ್ಲಿ ಎದುರಿಗೆ ಕುಳಿತು ಪಾಠವನ್ನು ಕೇಳುತ್ತಿದ್ದ ವೃಷಭವನ್ನು ತೋರಿ ಈ ವೃಷಭವೇ ಬರೆಯುತ್ತದೆ ಎಂದರು. ಆ ವೃಷಭವು ದಿನವು ಆಚಾರ್ಯರ ಸಂಚಾರ ಕಾಲದಲ್ಲಿ ಅವರು ಬರೆದ ಗ್ರಂಥಗಳನ್ನು ಹೊತ್ತುಕೊಂಡು ಹೋಗುತ್ತಿತ್ತು. ಅದನ್ನು ಸಹಿಸದ ಆ ಶಿಷ್ಯರು ವೃಷಭಕ್ಕೆ ಹಾವು ಕಚ್ಚಲಿ ಎಂದರು. ವೃಷಭಕ್ಕೆ ಹಾವು ಕಚ್ಚಲು ಕರುಣಾಮಯಿಗಳಾದ ಶ್ರೀ ಮಧ್ವರು ತಾವು ರಚಿಸಿದ್ದ ದ್ವಾದಶ ಸ್ತೋತ್ರವನ್ನು ಪಠಿಸಿ ವಿಷವನ್ನು ನಿವೃತ್ತಿ ಮಾಡಿದರು. ಆ ವೃಷಭವು ಮುಂದೆಯು ಶ್ರೀ ಮಧ್ವರ ಪಾಠವನ್ನು ಭಕ್ತಿಯುತವಾಗಿ ಶ್ರವಣ ಮಾಡುತ್ತಿತ್ತು. ಆ ವೃಷಭವೇ ಜಯತೀರ್ಥರಾಗಿ ಜನ್ಮತಾಳಿ ಆಚಾರ್ಯರ ಗ್ರಂಥಕ್ಕೆ ಟೀಕೆಯನ್ನು ಬರೆದು ಟೀಕಾಚಾರ್ಯರೆಂದು ಖ್ಯಾತಿಗೊಂಡರು.

ಶ್ರೀ ಜಯತೀರ್ಥರ ಪೂರ್ವನಾಮಧೇಯ ಧೊಂಢುರಾಯರೆಂದು, ಅವರು ಸಾದಿನಾಡಿನ ರಾಜನ ಮನೆತನದವರೆಂದು, ಹಾಗೂ ದೇಶಸ್ಥ ವೈಷ್ಣವ ಬ್ರಾಹ್ಮಣರೆಂದು ತಿಳಿದು ಬರುತ್ತದೆ. ಶ್ರೀ ಅಕ್ಷೋಭ್ಯತೀರ್ಥರು ಪೂರ್ವದಲ್ಲಿ ವೃಷಭವಾಗಿ ಈಗ ಅಶ್ವಾರೂಢನಾಗಿ ನೀರನ್ನು ಕುಡಿಯುತ್ತಿದ್ದ ಧೊಂಡು ರಾಯನಿಗೆ ಸನ್ಯಾಶ್ರಮವನ್ನಿತ್ತು ಶ್ರೀ ಜಯತೀರ್ಥರೆಂದು ನಾಮಕರಣ ಮಾಡಿದರು. ಶ್ರೀ ಜಯತೀರ್ಥರು ತಾವು ಹಿಂದಿನ ಜನ್ಮದಲ್ಲಿ ವೃಷಭವಾಗಿ ಶ್ರೀಮಧ್ವಮುನಿಗಳಿಂದ ಕೇಳಿದ್ದ ಗ್ರಂಥಗಳ ಪಾಠವನ್ನು ಅವರ ಅನುಗ್ರಹದಿಂದ ಪಾಂಡಿತ್ಯ, ಪ್ರತಿಭೆಯ ಪ್ರತಿರೂಪವಾಗಿ, ಶ್ರೀ ಮಧ್ವಯತಿಗಳ ಗ್ರಂಥಗಳಿಗೆ ಟೀಕಾವನ್ನು ಬರೆದರು. ಶ್ರೀಮದಾನಂದತೀರ್ಥರು ಸರ್ವಜ್ಞರು. ಅವರ ಪ್ರತಿನಿಧಿ ಗಳಾದ ಜಯತೀರ್ಥರು ಸರ್ವಜ್ಞಕಲ್ಪರು.

ಶ್ರೀ ಅಕ್ಷೋಭ್ಯತೀರ್ಥರು ಇಂಥ ಎರಡು ಕೊಡುಗೆಗಳನ್ನಿತ್ತು ಮಳಕೇಢದಲ್ಲಿ ವೃಂದಾವನಸ್ಥರಾದರು. ಮಳಖೇಡ ಸೇಡಂ ಹತ್ತಿರವಿದೆ. ಬೆಂಗಳೂರಿನಿಂದ ಹೋಗುವವರು ರೈಲಿನಲ್ಲಿ ಗುಲ್ಬರ್ಗ ನಿಲ್ದಾಣದಲ್ಲಿಳಿದು ಅಲ್ಲಿಂದ ಮಳಖೇಡಕ್ಕೆ ಬಸ್ಸನಲ್ಲಿ ಹೋಗಬಹುದು. ಖಾಸಗಿ ವಾಹನ (Taxi)ಗಳು ಸಹ ದೊರೆಯುತ್ತವೆ. ಗುಲ್ಬರ್ಗಾಕ್ಕೆ ಬಹಳಷ್ಟು ಸಿಗುತ್ತವೆ. ಅಲ್ಲಿ ಶ್ರೀ ಜಯತೀರ್ಥರ ವೃಂದಾವನವು ಹಾಗೂ ಶ್ರೀ ಮದುತ್ತರಾದಿ ಮಠಾಧೀಶರ ವೃಂದಾವನಗಳೂ ಇವೆ.

ಕ್ಷೋಭೆಯನ್ನು ನಿವಾರಿಸಿ ಸರ್ವ ಸೌಖ್ಯ ಸಂಪತ್ತನ್ನು ಕೊಡುವ ಶ್ರೀ ಅಕ್ಷೋಭ್ಯರನ್ನು ನೆನಸಿದ ದಿನವು ಶುಭದಿನವು. ಹಾಗೂ ಮಂಗಳಕರವು.

ಶ್ರೀ ಅಕ್ಷೋಭ್ಯತೀರ್ಥರು ಪಾಹಿ, ಶ್ರೀ ಮುಖ್ಯಪ್ರಾಣ ಪಾಹಿ

ಶ್ರೀ ಮೂಲರಾಮ ಸೀತಾದೇವಿ ಪಾಹಿಮಾಂ ಪಾಹಿಮಾಂ.



ಶ್ರೀಸತ್ಯಧರ್ಮತೀರ್ಥಕರಾರ್ಚಿತ
ಶ್ರೀ ಲಕ್ಷ್ಮೀನರಸಿಂಹದೇವರು

ಶ್ರೀ ಅಕ್ಷೋಭ್ಯತೀರ್ಥರಿಗೆ ಪ್ರಸನ್ನರಾದ
ಶ್ರೀ ಮಧ್ವಾಚಾರ್ಯಕರಾರ್ಚಿತ



ಶ್ರೀ ಪ್ರಸನ್ನ ವಿಠಲ ದೇವರು

ಸುಶೀಲಾ ಪ್ರಕಾಶನ
"ಭೀಮಸೇನಾ", ನಂ.52-1/71-1, ಗಾಂಧಿಬಜಾರ್
ಬೆಂಗಳೂರು-04, ದೂರವಾಣಿ : 26674242
ಮೊಬೈಲ್ : 94484 09399